# B.A IIIrd Semester
# DEPT OF SOCIOLOGY
# DSC 1 C: SOCIAL RESEARCH METHODS

## Unit –V: SOURCE OF DATA COLLECTION:
## ದತ್ತಾಂಶ ಸಂಗ್ರಹಣೆಯ ಮೂಲಗಳು

- Survey, Sampling Techniques,
- Primary and Secondary Sources of Data
- Scheduled & Observation

## LEARNING OBJECTIVE

- Define and describe the sources of data and collection of data
- Explain how the surveymethod is used in sociological research
- Understand the difference between Primary and secondary data sources
- Understand the Scheduled and Observation method in sociological research

## SOURCE OF DATA COLLECTION:
## ದತ್ತಾಂಶ ಸಂಗ್ರಹಣೆಯ ಮೂಲಗಳು

### INTRODUCTION:

ಮಾಹಿತಿ ಅಥವಾ ದತ್ತಾಂಶಗಳನ್ನು ಸಂಗ್ರಹಿಸುವ ಮೂಲಗಳು (ಆಧಾರಗಳು) ಸಂಶೋಧನೆಯಲ್ಲಿ ಬಹುಮುಖ್ಯವಾದ ಪಾತ್ರವನ್ನು ವಹಿಸುತ್ತವೆ. ಅಂದರೆ ಸಂಶೋಧನೆಗೆ ಆಯ್ಕೆ ಮಾಡಿಕೊಂಡ ವಿಷಯವನ್ನು ಕುರಿತು ವಿವಿಧ ಮೂಲಗಳಿಂದ ಮಾಹಿತಿಯನ್ನು ಸಂಗ್ರಹಿಸುವುದು ಮತ್ತು ಸಂಗ್ರಹಿಸಿದ ಆ ಮಾಹಿತಿಯ ಆಧಾರದ ಮೇಲೆ ಸಂಶೋಧನೆಯ ನಮೂನೆ, ವಿಧಾನ ಮತ್ತು ಪ್ರಾಕಲ್ಪನೆಯನ್ನು ರೂಪಿಸಲು ಸಾಧ್ಯವಾಗುತ್ತದೆ. ಆದ್ದರಿಂದ ಸಂಶೋಧಕನು ಸಂಶೋಧನಾ ಕಾರ್ಯದ ಅಗತ್ಯಗಳನ್ನು ನೋಡಿಕೊಂಡು ನಂಬಲರ್ಹವಾದ ಮಾಹಿತಿಯನ್ನು ಬೇರೆ ಬೇರೆ ರೀತಿಯಲ್ಲಿ ಸಂಗ್ರಹಿಸುವ ಕೌಶಲ್ಯವನ್ನು ಬಳಸಿಕೊಂಡು ಮಾಹಿತಿಯನ್ನು ಸಂಗ್ರಸುವುದು ಅವಶ್ಯಕವಾಗಿದೆ. ಈ ಅಧ್ಯಾಯದಲ್ಲಿ ದತ್ತಾಂಶಗಳ ಸಂಗ್ರಹಣೆಯ ಪ್ರಾಥಮಿಕ ಮತ್ತು ಅನುಷಂಗಿಕ ಮೂಲಗಳು ಮತ್ತು ಅವಲೋಕನ, ಪ್ರಶ್ನಾವಳಿ, ಸಂದರ್ಶನ ವಿಧಾನಗಳ ಬಗ್ಗೆ ತಿಳಿದುಕೊಳ್ಳಬಹುದು.

### ದತ್ತಾಂಶದ ಅರ್ಥ
### Meaning of data

ದತ್ತಾಂಶಗಳೆಂದರೆ ಸಂಖ್ಯಾ ರೂಪದ ಮತ್ತು ವಿವರ ರೂಪದ ಮಾಹಿತಿಗಳು ಅಥವಾ ದತ್ತಾಂಶಗಳನ್ನು ಸಮಗ್ರ ರೂಪದ ಸಂಖ್ಯಾ ಹೇಳಿಕೆಗಳೆಂದು ಕರೆಯಬಹುದು.

# ದತ್ತಾಂಶಗಳ ಸಂಗ್ರಹ

## Data Collection

ಒಂದು ಸಂಶೋಧನೆಯ ಅಧ್ಯಯನಕ್ಕೆ ಅಗತ್ಯವಿರುವ ಮಾಹಿತಿಗಳನ್ನು ಸಂಗ್ರಹಿಸುವುದಕ್ಕೆ ದತ್ತಾಂಶಗಳ ಸಂಗ್ರಹ ಎಂದು ಕರೆಯುತ್ತಾರೆ. ದತ್ತಾಂಶಗಳ ಸಂಗ್ರಹವು ಅದರದೆ ಆದ ಉದ್ದೇಶ, ವ್ಯಾಪ್ತಿ, ವಿಧಾನಗಳನ್ನು ಒಳಗೊಂಡಿರುತ್ತವೆ. ದತ್ತಾಂಶಗಳನ್ನು ಸಂಗ್ರಹಿಸುವಾಗ ಈ ಕೆಳಗಿನ ಅಂಶಗಳು ಮುಖ್ಯವಾಗಿವೆ

1. ದತ್ತಾಂಶಗಳನ್ನು ಸಂಗ್ರಹಿಸುವಾಗ ಉದ್ದೇಶ ಸ್ಪಷ್ಟವಾಗಿರಬೇಕು
2. ದತ್ತಾಂಶಗಳನ್ನು ಸಂಗ್ರಹಣೆಗೆ ಸೂಕ್ತವಾದ ವಿಧಾನದ ಆಯ್ಕೆ
3. ದತ್ತಾಂಶಗಳ ಮಾಪನಕ್ಕೆ ಬಳಸುವ ಘಟನೆಗಳು ಸ್ಪಷ್ಟವಾಗಿರಬೇಕು
4. ದತ್ತಾಂಶಗಳ ಸಂಗ್ರಹಣೆಗೆ ಖಚಿತತೆಯಿರಬೇಕು
5. ದತ್ತಾಂಶಗಳನ್ನು ಸಂಗ್ರಹಿಸಲು ಪೂರ್ವವಾಗಿ ಪ್ರಶ್ನಾವಳಿಗಳನ್ನು ಸಿದ್ಧಪಡಿಸಿಕೊಳ್ಳಬೇಕು

# ದತ್ತಾಂಶಗಳ ಲಕ್ಷಣಗಳು

## Characteristics of data

ದತ್ತಾಂಶಗಳು ಸಂಖ್ಯೆ ಮತ್ತು ಅಕ್ಷರಗಳ ರೂಪದಲ್ಲಿದ್ದು ಸಂಗ್ರಹಿಸಿದ ಮಾಹಿತಿಯಿಂದ ವಿಷಯದ ಸತ್ಯಾಂಶಗಳನ್ನು ರೂಪಿಸಿಸಲು ಅಧ್ಯಯನಕ್ಕೆ ಸಂಬಂಧಿಸಿದಂತೆ ವಿಶ್ಲೇಷಣೆಯನ್ನು ಮಾಡಲು ಸಹಕಾರಿಯಾಗುವ ಲಕ್ಷಣಗಳನ್ನು ಒಳಗೊಂಡಿದೆ. ಅವುಗಳು ಹೀಗಿವೆ.

1. **ಸಂಖ್ಯಾ ರೂಪ**
2. **ಮೊತ್ತರೂಪದ ಸತ್ಯಾಂಶಗಳು**
3. **ದತ್ತಾಂಶಗಳು ಪ್ರಭಾವಿತವಾಗಿತ್ತವೆ**
4. **ದತ್ತಾಂಶಗಳು ನಿಖರವಾಗಿರುತ್ತವೆ**
5. **ದತ್ತಾಂಶಗಳಿಗೆ ಸ್ಥಾನೀಕರಣವಿದೆ:**

### ಸಂಶೋಧನೆಗಾಗಿ ಮಾಹಿತಿಗಳನ್ನು ಸಂಗ್ರಹಿಸಲು ಸಹಾಯಕವಾದ ವಿಧಾನ/ಮೂಲಗಳು ಈ ಕೆಳಗಿನಂತಿವೆ.

## Source of data collection

ಸಾಮಾಜಿಕ ಸಂಶೋಧನೆಯಲ್ಲಿ ವಿಶ್ವಾಸಕ್ಕೆ ಅರ್ಹವಾದ ಮಾಹಿತಿಯನ್ನು ಸಂಗ್ರಹಿಸಲು ಸಂಶೋಧಕನ ತನ್ನ ವಿಷಯಕ್ಕೆ ಅನುಗುಣವಾಗಿ ನಿರ್ದಿಷ್ಟಪಡಿಸಿದ ಕ್ಷೇತ್ರಕಾರ್ಯದ ಮೂಲಕ ಹಲವಾರು ರೀತಿಯ ತಂತ್ರ ಸಾಧನಗಳಿಂದ ಸಂಗ್ರಹಿಸುತ್ತಾರೆ. ಆ ಸಾಧನಗಳು ಅಥವಾ ಮೂಲಗಳು ಈ ಕೆಳಗಿನಂತಿವೆ.

1. ಸಮೀಕ್ಷೆಯ ವಿಧಾನ — Survey method
2. ಅವಲೋಕನ ವಿಧಾನ — Observation method
3. ಸಂದರ್ಶನ ವಿಧಾನ — Interview method

4. ಪ್ರಶ್ನಾವಳಿ ವಿಧಾನ questionnaire method
5. ಗುಂಪು ಚರ್ಚೆ ವಿಧಾನ Group Discussion method
6. ಫೋಕಸ್ ಚರ್ಚೆ ವಿಧಾನ Focus Group discussion method

## Survey ಸಮೀಕ್ಷೆ

ಸಮಾಜಿಕ ಸಮೀಕ್ಷೆಯು ಸಾಮಾಜಿಕ ಸಂಶೋಧನೆಯಲ್ಲಿ ಮಾಹಿತಿ ಸಂಗ್ರಹಿಸಲು ಬಳಸುವ ಒಂದು ತಂತ್ರ ವಿಧಾನವಾಗಿದೆ. ಪ್ರಸ್ತುತ ಸಮಾಜದಲ್ಲಿ ನಡೆಯುತ್ತಿರುವ ಸಾಮಾಜಿಕ ವಿದ್ಯಮಾನಗಳನ್ನು ಕುರಿತಾಗಿ ಅಧ್ಯಯನ ಮಾಡುವಾಗ ಈ ಸಮೀಕ್ಷೆಯ ತಂತ್ರವಿಧಾನವು ಬಳಸಲಾಗುತ್ತದೆ. ಸಮೀಕ್ಷೆ ಎಂದರೆ ಪರಿಶೀಲಿಸುವುದು ಅಥವಾ ವಿಮರ್ಶಿಸುವುದು ಎಂದು ಅರ್ಥ. ಸಾಮಾಜಿಕ ಜೀವನದ ವಿವಿಧ ಮುಖಗಳನ್ನು ಕೂಲಂಕೂಷವಾಗಿ ಪರಿಶೀಲಿಸಿ ಅಧ್ಯಯನ ವಿಷಯಕ್ಕೆ ಬೇಕಾದ ಫಲಿತಾಂಶವನ್ನು ಹೊಂದಿರುವಾಗ ಅದು ಸಾಮಾಜಿಕ ಸಮೀಕ್ಷೆ ಎನ್ನಿಸಿಕೊಳ್ಳುತ್ತದೆ.

### ಸಾಮಾಜಿಕ ಸಮೀಕ್ಷೆಯ ಐತಿಹಾಸಿಕ ಹಿನ್ನೆಲೆ **B**ackground of the Social Survey

11ನೇ ಶತಮಾನದ ನಂತರ ಪ್ರಾರಂಭವಾದ ಸಾಮಾಜಿಕ ಸಮೀಕ್ಷೆಯು ಸಾಮಾಜಿಕ ಸಮಸ್ಯೆಗಳ ಕುರಿತಾಗಿ ಅಥವಾ ಆಡಳಿತಾತ್ಮಕ ಅನುಕೂಲತೆಗಳಿಗಾಗಿ ಅವಶ್ಯಕವಾದ ಮಾಹಿತಿಯನ್ನು ಒದಗಿಸುವ ಉದ್ದೇಶದಿಂದ ಪರಮಾಣಾತ್ಮಕ/ಗುಣಾತ್ಮಕ(ಕ್ವಾಲಿಟೇಟಿವ್) ಸ್ವರೂಪದಲ್ಲಿ ಕಂಡು ಬರುತ್ತದೆ ಎಂದು ಹೇಳಿರುವ ಡಂಕನ ಮಿಚೆಲ್‌ರವರು ಕೃಷಿ & ಕೃಷಿಗೆ ಸಂಬಂಧ ಪಟ್ಟ ವಿಷಯದ ಕುರಿತು ಸಮೀಕ್ಷೆಯನ್ನು ಮಾಡಿ ಮುಂದಿನವುಗಳನ್ನು ಉಲ್ಲೇಖಿಸಿದ್ದಾರೆ. ಉದಾ: 17ನೇ ಮತ್ತು 18ನೇ ಶತಮಾನಗಳ ಜನಸಂಖ್ಯಾಶಾಸ್ತ್ರಜ್ಞರ ಪ್ರಬಂಧಗಳು ಕೃಷಿಗೆ ಸಂಬಂಧಪಟ್ಟಂತಹ ವರದಿಗಳಾಗಿವೆ ಎಂದಿದ್ದಾರೆ.

### ಆಧುನಿಕ ಸಾಮಾಜಿಕ ಸಮೀಕ್ಷೆ

19ನೇ ಶತಮಾನದಲ್ಲಿ ಆಧುನಿಕ ಸಾಮಾಜಿಕ ಸಮೀಕ್ಷೆ ಆರಂಭವಾಯಿತು. ಆಧುನಿಕ ಯುಗದಲ್ಲಿ ನಗರಗಳ ಜನರ ಜೀವನ ಸಮಾಜಿಕ ಪರಿಸ್ಥಿತಿ ವರ್ಗಗಳ ಭೌತಿಕ ಪ್ರಕ್ರಿಯೆಗಳನ್ನು ಕುರಿತು ಅಧ್ಯಯನ ನಡೆದವು. ಚಾರ್ಲ್ಸ್‌ಬೂತ ಕೌಂಟ್ರಿ &ಭೌತಿ ಎಂಬ ಸಂಶೋಧಕರು ನಗರಗಳಲ್ಲಿ ಬಡತನದ ಬಗ್ಗೆ ಸಮೀಕ್ಷೆ ನಡೆಸಿದ್ದರು. ರ್‍ಯಾಡ್ ಜಲ್ಲ ರಿಪ್ಲ ಗೆಡ್ಡಾಸ್ ರವರ ಪರಿಸರಶಾಸ್ತ್ರ (ಇಕಾಲೋಜಿಕಲ್ ಸರ್ವೇ) ಅಧ್ಯಯನ ಕುರಿತು ಸಮೀಕ್ಷೆ ನಡೆಸಿದರು ಶರ್ವೆಲ್ ಲಿನೆಸ್ ವಾರ್ನರ ಲಂಟ ರವರು ನಗರದ ಕಾರ್ಯತ್ಮಕತೆಯ ಕುರಿತು ಸಮೀಕ್ಷೆ ನಡೆಸಿದರು.

### 1950 ರ ನಂತರದ ಸಮೀಕ್ಷೆ:

ಭಾರತದಾಂತ್ಯಾ ಜನರ ಸಾಮಾಜಿಕ ಆರ್ಥಿಕ ಸ್ಥಿತಿಯ ಬಗ್ಗೆ ಮನೆ–ಮನೆಗೆ ಹೋಗಿ ಮಾಡಿದ ಮಾಹಿತಿ ಆಧಾವ ಸಮೀಕ್ಷೆ ರಿಸರ್ವ ಬ್ಯಾಂಕಿನ ಆಡಿಯಲ್ಲಿರುವ ಭಾರತದಾಂತ್ಯ ಆರ್ಥಿಕ ಸಮೀಕ್ಷೆ ಮಾಡುತ್ತದೆ.

### ಸಾಮಾಜಿಕ ಸಮೀಕ್ಷೆಯ ಉದ್ದೇಶಗಳು: Objectives of Social Survey

ಸಾಮಾಜಿಕ ಸಮೀಕ್ಷೆಗಳು 19ನೇ ಶತಮಾನದಿಂದಲೇ ಪ್ರಾರಂಭವಾಗಿದ್ದು ವಿಷಯಗಳ ಆಧರಿಸಿ ಅದರದೆ ಆದ ಉದ್ದೇಶಗಳನ್ನು ಒಳಗೊಂಡಿರುವುದರ ಜೊತೆಗೆ ವಿವರವಾದ ಮಾಹಿತಿಯನ್ನು ನೀಡಲು ಗುರುತಿಸಿಕೊಳ್ಳುತ್ತದೆ. ಅಧ್ಯಯನಕ್ಕೆ ಸಂಬಂಧಿಸಿದ ಉದ್ದೇಶಗಳು ಈ ಕೆಳಗಿನಂತಿವೆ.

1. ಸಮುದಾಯಕ್ಕೆ ಸಂಬಂಧಿಸಿದ ಸಾಮಾಜಿಕ ಅಂಶಗಳ ಬಗ್ಗೆ ಮಾಹಿತಿ ಸಂಗ್ರಹಿಸುವುದು.

   Data collection regarding the social acpects of a community
2. ಸಾಮಾಜಿಕ ಸಮಸ್ಯೆಗಳನ್ನು ಅಧ್ಯಾಯನ ಮಾಡುವುದು.

   The study of Social problems
3. ಪ್ರಾತ್ಯಕ್ಷಿಕೆ ಮತ್ತು ಉಪಯುಕ್ತತೆಯ ದೃಷ್ಟಿ

   Practical and utilitarial view point

## 1950ಕ್ಕೂ ಮುಂಚೆ ಭಾರತದಲ್ಲಿ ನಡೆಸಿದ ಕೆಲವು ಸಮೀಕ್ಷೆಗಳು ಈ ಕೆಳಗಿನಂತಿವೆ.

ಭಾರತದಲ್ಲಿ 1950ರ ನಂತರದಲ್ಲಿ ಏರುತ್ತಲೇ ಹೋದ ಸಾಮಾಜಿಕ ಸಮೀಕ್ಷೆಗಳು ದೇಶದ ಎರಡು ಪ್ರಮುಖ ಸಂಸ್ಥೆಗಳಾದ "The Indian Statistical Institute and National Sample Survey "ಭಾರತದಲ್ಲಿ ಸಾಮಾಜಿಕ ಸಮೀಕ್ಷೆಗಳ ಬೆಳವಣಿಗೆಗೆ ಮಹತ್ವದ ಕೊಡುಗೆಯನ್ನು ನೀಡಿವೆ. ಭಾರತದ ರಿಸರ್ವ್ ಬ್ಯಾಂಕ್‌ನ "All India Rural Credit Survey"ಸಂಸ್ಥೆಯು ರಾಷ್ಟ್ರವ್ಯಾಪಿಯಾದ ಸಮೀಕ್ಷೆಗಳನ್ನು ನಡೆಸಿದೆ. ಇತ್ತೀಚಿನ ವರ್ಷಗಳಲ್ಲಿ ಸರ್ಕಾರಿ ಸಂಸ್ಥೆಗಲು, ಖಾಸಗಿ ಸಂಸ್ಥೆಗಳು ಔದ್ಯಮಿಕ ಸಂಸ್ಥೆಗಲು ವಿಶ್ವವಿದ್ಯಾಲಯಗಳ ವ್ಯಾಪಾರ ಹಾಗೂ ವಾಣಿಜ್ಯೋದ್ಯಮಗಳ ಪತ್ರಿಕೆಗಳ ನಿಯತಕಾಲಿಕೆಗಳನ್ನು ಮತ್ತು ಕೆಲವು ಖಾಸಗಿ ವ್ಯಕ್ತಿಗಳ, ರಾಜಕೀಯ, ಆರ್ಥಿಕ, ಸಾಮಾಜಿಕ, ವಾಣಿಜ್ಯ, ವ್ಯವಹಾರ, ಕೈಗಾರಿಕೆ ಶಿಕ್ಷಣ ಆರೋಗ್ಯ ಮುಂತಾದ ವಿಷಯಗಳ ಬಗ್ಗೆ ಸಮೀಕ್ಷೆಗಲು ದೊಡ್ಡ ಪ್ರಮಾಣದಲ್ಲಿ ನಡೆದಿವೆ. ಜಾಕೋಬ್‌ಸ ರವರ ಹೌವ್ ದಿ ಅದೆರ ಹೆಲ್ಪ ಲೌವ್ಸ 1890, ಬ್ಯಾಟಲ್ ಆಫ್ ದ್ ಸಲಂ 1902, ಲಂಕನ್ ಸ್ಟೀವನ ರವರ ದ್ ಶೆಮ್ ಆಫ್ ದ್ ಸೀಟಿಸ್.

## ಸಮೀಕ್ಷಾ ಅಧ್ಯಯನ Social Survey

1910ರ ಮೊದಲು ಶಾಲಾ ಸರ್ವೇಕ್ಷಣೆಯನ್ನು ಅಮೇರಿಕಾ ಸಂಯುಕ್ತ ಸಂಸ್ಥಾನದ ಇವಾಹೋ ಬೋಯಸ್ ಶಾಲೆಯಲ್ಲಿ ಮಾಡಲಾಯಿತು. ಇದು ಪದ್ಧತಿಯ ಸರ್ವೇಕ್ಷಣೆ ಜನಪ್ರಿಯವಾಗಲಿಲ್ಲ. ಆದರೆ ಇಂದು ಸಮೀಕ್ಷಾ ವಿಧಾನವು ವಿಸ್ತ್ರತವಾದ ವೈಶಾಲ್ಯತೆಯನ್ನು ಹೊಂದಿದೆ. ಪಾಶ್ಚಾತ್ಯ ದೇಶಗಳಲ್ಲಿ ಚುನಾವಣೆಯ ಸಂದರ್ಭದಲ್ಲಿ ಜನರ ಅಭಿಪ್ರಾಯಗಳನ್ನು ಸಂಗ್ರಹಿಸುವುದು ಸಮೀಕ್ಷೆಯ ಒಂದು ವಿಧಾನವಾಗಿದೆ. ಜೈವಿಕ ವಿಜ್ಞಾನಿಗಳು ಯಾವುದೇ ಹೊಸ ಔಷಧಿಯನ್ನು ಅಥವಾ ಜೀವನಿರೋಧಕವನ್ನು ಕಂಡು ಹಿಡಿದು ಅವುಗಳನ್ನು ಪ್ರಾಣಿಗಳ ಮೇಲೆ ಪ್ರಯೋಗಿಸಿ, ಅದರ ಪರಿಣಾಮಗಳನ್ನು ತಿಳಿದುಕೊಳ್ಳುತ್ತಾರೆ. ಇದು ಸಹ ಒಂದು ವಿಧವಾದ ಸಮೀಕ್ಷೆಯಾಗಿದೆ.

## ಸಮೀಕ್ಷಾ ವಿಧಾನದ ಅರ್ಥ Meaning of the Survey method

ಸಮೀಕ್ಷೆ ಎಂಬ ಪದ ಆಂಗ್ಲ ಭಾಷೆಯ ಸರ್ವೇ ಎಂಬ ಪದದಿಂದ ಉತ್ಪತ್ತಿಗೊಂಡಿದೆ. ಸಮೀಕ್ಷೆ ಎನ್ನುವುದು ಸಂಸ್ಕೃತ ಪದವಾಗಿದೆ. ಸಮೀಕ್ಷೆ ಎಂದರೆ ಪರಿಶೀಲಿಸುವುದು ಅಥವಾ ವಿಮರ್ಶಿಸುವುದು ಎಂದರ್ಥ. ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳ ಸ್ವರೂಪವನ್ನು ಕಂಡುಹಿಡಿಯಲು ಮತ್ತು ಸತ್ಯಾಂಶವನ್ನು ಸಂಶೋಧಿಸಲು ಸಮೀಕ್ಷಾ ವಿಧಾನ ಬಳಸುತ್ತಾರೆ.

## ಸಮೀಕ್ಷಾ ವಿಧಾನದ ಲಕ್ಷಣಗಳು Characteristics of the Survey Method

ಸಾಮಾಜಿಕ ಸಮೀಕ್ಷೆಗಳ ಕ್ಷೇತ್ರವು ವಿಶಾಲವಾದ ಮತ್ತು ವೈವಿಧ್ಯಮಯವಾದ ಸಾಮಾಜಿಕ ಜೀವನದ ಎಲ್ಲಾ ಅಂಶಗಳನ್ನು ಒಳಗೊಂಡಿರುವ ಲಕ್ಷಣಗಳನ್ನು ಈ ಕೆಳಗಿನಂತಿವೆ

1. ಸಮೀಕ್ಷೆಯು ಸಹಜ ಪರಿಸ್ಥಿತಿಯಲ್ಲಿ ನಡೆಸಲಾಗುತ್ತದೆ.
2. ಸಮೀಕ್ಷೆಯು ಕ್ಷೇತ್ರ ಅಧ್ಯಯನವನ್ನು ಒಳಗೊಂಡಿರುತ್ತದೆ
3. ಸಮೀಕ್ಷೆಯು ನೇರವಾಗಿ ಪ್ರತಿಕ್ರಿಯೆಗಳನ್ನು ಸಂಗ್ರಹಿಸುತ್ತದೆ
4. ಸಮೀಕ್ಷೆಯು ಬೃಹತ್ ಗಾತ್ರದ ಜನಸಂಖ್ಯೆಯನ್ನು ಒಳಗೊಂಡಿರುತ್ತದೆ.
5. ಸಮೀಕ್ಷೆಯು ವ್ಯಾಪಕ ಮತ್ತು ತೀಕ್ಷ್ಣ ಅಧ್ಯಯನವಾಗಿರುತ್ತದೆ.
6. ಸಮೀಕ್ಷೆಯು ಭೌಗೋಳಿಕ ವ್ಯಾಪ್ತಿ ನಿಗದಿಯಾಗಿರುತ್ತದೆ. ಉದಾ:ಗ್ರಾಮ , ತಾಲ್ಲೂಕು, ಜಿಲ್ಲೆ, ರಾಜ್ಯ, ದೇಶ.
7.

## ಸಮೀಕ್ಷಾ ವಿಧಾನದ ಉದ್ದೇಶಗಳು Objectives of Survey methods

ಸಾಮಾಜಿಕ ಸಮೀಕ್ಷೆಯ ವಿಧಾನವು ಮಾಹಿತಿ ಸಂಗ್ರಹಣೆಯ ಕ್ರಮಬದ್ಧವಾದ ಕಾರ್ಯಚಟುವಟಿಕೆಗಳನ್ನು ಬಿಂಬಿಸುತ್ತದೆ. ಮತ್ತು ಅದರದೆ ಆದ ವಿಷಯದ ಆಯ್ಕೆ , ಪೂರ್ವಸಿದ್ಧತೆ, ಯೋಜನೆ,ಉದ್ದೇಶಗಳು ಒಳಗೊಂಡಿರುತ್ತವೆ.

1. ಮಾಹಿತಿ ಒದಗಿಸುವುದು
2. ವಿದ್ಯಮಾನ ವಿವರಣೆ
3. ತುಲನೆ ಮಾಡುವುದು
4. ಕಾರ್ಯಕಾರಣಿ ಸಂಬಂಧ

**ಮೋಸರ್.ಸಿ.ಎ ಪ್ರಕಾರ** " ಸಮೀಕ್ಷೆಯು ಉಪಯುಕ್ತ ಪ್ರಾಕಲ್ಪನೆಗಳನ್ನು ರಚಿಸುವುದು ಮತ್ತು ಅತ್ಯಂತ ಮುಂದುವರೆದ ಹಂತದಲ್ಲಿ ಅವುಗಳನ್ನು ಪರೀಕ್ಷಿಸುವುದು ಆಗಿದೆ. ಒಂದು ಸಂಶೋಧನೆಯಲ್ಲಿ ಸಮೀಕ್ಷೆಯ ಉಪಯುಕ್ತತೆಯು ಆ ವಿಷಯದ ಬಗ್ಗೆ ಎಷ್ಟು ತಿಳಿದಿದೆ. ಎಂಬುದರ ಮೇಲೆ ಅಥವಾ ಮಾಹಿತಿಯ ಉದ್ದೇಶದ ಮೇಲೆ ಅವಲಂಬಿತವಾಗಿರುತ್ತದೆ."

ವೆಬ್‌ಸ್ಟರ್ ನಿಘಂಟು ಪ್ರಕಾರ" ಸಮೀಕ್ಷೆಯು ತಾರ್ಕಿಕ ಅವಲೋಕನದ ಅಧಿಕಾರಯುಕ್ತ ನಿಖರವಾದ ಮಾಹಿತಿ ಒದಗಿಸುವ ಮತ್ತು ಒಂದು ಸ್ಥಳದ ನಿರ್ದಿಷ್ಟ ಅಂಶಗಳನ್ನು ಅಧ್ಯಯನ ಮಾಡುವುದಾಗಿದೆ."

## ಸಮೀಕ್ಷಾ ವಿಧಾನ

"ಒಂದು ನಿರ್ದಿಷ್ಟ ಅವಧಿಯಲ್ಲಿ ಅಸಂಖ್ಯಾತ ವಿದ್ಯಮಾನಗಳ ಅಂಕಿ ಅಂಶಗಳನ್ನು ಒಂದು ವ್ಯವಸ್ಥಿತ ರೀತಿಯಲ್ಲಿ ಸಂಗ್ರಹಿಸಿ ಅದನ್ನು ಇಡೀ ಸಮಷ್ಠಿಗೆ ಸಾಮಾನ್ಯೀಕರಣ ಮಾಡುವ ವಿಧಾನವೇ ಸಮೀಕ್ಷಾ ವಿಧಾನ"

## ಸಾಮಾಜಿಕ ಸಮೀಕ್ಷೆಯ ಪ್ರಕಾರಗಳು Types of Surveys

ಅತ್ಯಂತ ವಿಶಾಲವಾದ ಮಾಹಿತಿಯನ್ನು ಸಂಗ್ರಹಿಸುವ ಸಮೀಕ್ಷೆಯು ಎರಡು ರೂಪಗಳಲ್ಲಿ ವರ್ಗೀಕರಿಸಬಹುದು

1. ಸಾಮಾನ್ಯ ಸಮೀಕ್ಷೆಗಳು General Surveys
2. ವಿಶಿಷ್ಟೀಕೃತ ಸಮೀಕ್ಷೆಗಳು Specialise Surveys

## ಸಾಮಜಿಕ ಸಮೀಕ್ಷೆಗಳ ಪ್ರಾಮುಖ್ಯತೆ Importance of Social Surveys

ಸಾಮಾಜಿಕ ಸಮೀಕ್ಷೆಗಳು ಸಾಮಾಜಿಕ ಸಂಶೋಧನೆಯಲ್ಲಿ ದತ್ತಾಂಶಗಳನ್ನು ಸಂಗ್ರಹಿಸಲು ಸಹಕಾರಿಯಾಗಿದ್ದು ಸಂಶೋಧನೆಯಲ್ಲಿ ಅದರದೆ ಆದ ಪ್ರಾಮುಖ್ಯತೆಯನ್ನು ಹೊಂದಿದೆ.

1. ಸಾಮಾನ್ಯ ಸ್ವರೂಪ ಅಥವಾ ವಿಸ್ತೃತ ವ್ಯಾಪ್ತಿಯ ಸಮೀಕ್ಷೆ General or widespread Surveys
2. ವಿಶಿಷ್ಟೀಕೃತ ಅಥವಾ ಆಳವಾದ ಸಮೀಕ್ಷೆಗಳು Specialised or Deapth Surveys
3. ಅಂಚೆ ಸಮೀಕ್ಷೆಗಳು Mailed Surveys
4. ಪ್ರಾಥಮಿಕ ಸಮೀಕ್ಷೆಗಳು Primary Survey
5. ಜನಗಣತಿ ಸಮೀಕ್ಷೆಗಳು Census Survey
6. ಪ್ರತ್ಯೇಕ್ಷ ಸಮೀಕ್ಷೆಗಳು Direct Survey
7. ಸಾರ್ವಜನಿಕ ಅಥವಾ ಬಹಿರಂಗ ಸಮೀಕ್ಷೆಗಳು Public or Open Survey

## ಸಾಮಾಜಿಕ ಸಮೀಕ್ಷೆಯ ಮಿತಿಗಳು Limitation of Social Survey

ಸಾಮಾಜಿಕ ಸಮೀಕ್ಷೆಗಳಿಗೆ ಸಾಮಾಜಿಕ ವಾಸ್ತವತೆಯ ಮೇಲೆ ಬೆಳಕು ಚೆಲ್ಲುವಲ್ಲಿ ಪ್ರಮುಖವಾದ ಪಾತ್ರವನ್ನು ವಹಿಸಿದ್ದರು ಅದರದೆ ಆದ ಕೆಲವು ಮಿತಿಗಳನ್ನು ಒಳಗೊಂಡಿದೆ. ಅವುಗಳು ಹೀಗಿವೆ

1. ದುಬಾರಿಯಾದುದು Survey is costly
2. ವಿಳಂಬಕಾರಕವಾದುದು Survey is very slow
3. ಪೂರ್ವಗ್ರಹ ಪೀಡೆ Evil of prejudice
4. ಸೈದ್ಧಾಂತಿಕ ಚೌಕಟ್ಟಿನ ಕೊರತೆ Lacks of theoretical framework
5. ಪ್ರಾಕಲ್ಪನೆಯಿಲ್ಲದಿರುವಿಕೆ NO hypothesis
6. ನಿಷ್ಠಾವಂತ ಸಹಾಯಕ ಕಾರ್ಯಕರ್ತರ ಕೊರತೆ Dearth of committed workers
7. ಏಕರೂಪತೆಯಿಲ್ಲದಿರುವಿಕೆ No uniformity
8. ದೋಷಪೂರಿತ ನಮೂನೆಯ ಬಳಕೆಯ ಸಾಧ್ಯತೆ Possibility of the use o fdefective sample
9. ಕೇವಲ ಅಂಕಿಅಂಶಗಳ ಆಟ Survey Only a play of statistics
10. ನಮೂನೆಯ ಗಾತ್ರ ದೊಡ್ಡದಾಗಿರುವುದರಿಮದ, ಹಣ ಕಾಲಾವಕಾಶ, ಹಣ, ಸಿಬ್ಬಂದಿ ವರ್ಗ ಹೆಚ್ಚಾಗಿ ಬೇಕಾಗುತ್ತದೆ.
11. ಸಮೀಕ್ಷಾ ವಿಧಾನದಲ್ಲಿ ವೈಯಕ್ತಿಕ ವಿವರಗಳು ಸಿಗುವುದಿಲ್ಲ.
12. ಸಮೀಕ್ಷಾ ವಿಧಾನವು ಅಲ್ಪಾವಧಿಗೆ ಮಾತ್ರ ಬಳಸಬಹುದು
13. ತೀರ್ಮಾನದ ವಸ್ತುನಿಷ್ಠತೆ ಕಡಿಮೆ ಇರುತ್ತದೆ
14. ಒಂದು ನಿರ್ದಿಷ್ಟ ಸನ್ನಿವೇಶದಲ್ಲಿ ಜನರು ಒದಗಿಸುವ ಮಾಹಿತಿಯನ್ನು ಮಾತ್ರ ಹೊಂದಿರುತ್ತದೆ ಹಾಗೂ ಇದು ಬದಲಾಗುವುದಿಲ್ಲ.
15. ಸಮೀಕ್ಷೆಯು ಮಧ್ಯಮ ವರ್ಗದ ಸಾಮಾಜಿಕ ಸ್ಥಿತಿಗತಿಗಳಿಗೆ ಮೀಸಲಾಗಿರುತ್ತದೆ.
16. ಸಾಮಾಜಿಕ ಮತ್ತು ಆರ್ಥಿಕ ಸಮೀಕ್ಷೆಗಳನ್ನು ತುರ್ತಾಗಿ ಮಾಡಿ ಮುಗಿಸಲು ವಿಶ್ವಾಸಾರ್ಹತೆ ಕೊರತೆಯಾಗಿರುತ್ತದೆ

## ಸಮೀಕ್ಷಾ ವಿಧಾನದ ಅನುಕೂಲತೆಗಳು Advantages of Survey Method

ಸಾಮಾಜಿಕ ಸಮೀಕ್ಷೆಗಳು ಸಾಮಾಜಿಕ ಸಂಶೋಧನೆಗೆ ಆಯ್ಕೆ ಮಾಡಿಕೊಂಡ ವಿಷಯದ ಕ್ಷೇತ್ರಕ್ಕೆ ಸಂಬಂಧಪಟ್ಟ ಎಲ್ಲಾ ರೀತಿಯ ಮಾಹಿತಿಗಳನ್ನು ಸಂಗ್ರಹಿಸಲು ಈ ಕೆಳಗಿನಂತೆ ಅನುಕೂಲಮಾಡಿಕೊಡುತ್ತದೆ.

1. ನೇರ ಸಂಪರ್ಕ Direct Contact

2. ಹೊರ ಸಿದ್ಧಾಂತಗಳ ಅವಿರ್ಭಾವ — origion of new theories
3. ಭಾವನಾತ್ಮಕ ಪರಿಣಾಮಗಳು ವಿಶ್ಲೇಷಣೆ — Analysis of feelings
4. ಸಮಸ್ಯೆಗಳ ಪರಿಹರ — Problems solving
5. ಮುನ್ನಂದಾಜಿಗೆ ಸಹಕಾರಿ — Help to assumption
6. ಕಾರ್ಯಕಾರಣ ಸಂಬಂಧ ಶೋಧನೆ — Cause and consequences relationship

## ಸಮೀಕ್ಷಾ ವಿಧಾನದ ಹಂತಗಳು Stages of Survey Method

ಸಾಮಾಜಿಕ ಸಮೀಕ್ಷೆಯು ಕ್ರಮಬದ್ಧವಾಗಿ ಮಾಹಿತಿಯನ್ನು ಸಂಗ್ರಹಿಸಲು ಈ ಕೆಳಗಿನ ಹಂತಗಳನ್ನು ಅನುಸರಿಸುವುದ ಅವಶ್ಯಕವಾಗಿರುತ್ತದೆ

1. ಸಮಸ್ಯೆಯೊಂದರೆ ಆಯ್ಕೆ ಮತ್ತು ಸೂತ್ರೀಕರಣ — Selection to problem
2. ಸಂಶೋಧನಾ ವಿನ್ಯಾಸದ ರೂಪೀಕರಣ — Formulation of research design
3. ಪರಿಕಲ್ಪನೆ, ಸೂಚಿ ಮತ್ತು ಮಾಪಕಗಳ ಆಯ್ಕೆ — Selection to concepts and indicators
4. ಸಮೀಕ್ಷೆಯು ನಮೂನೆಯ ಆಯ್ಕೆ — Selection of sampling Method
5. ಮಾಹಿತಿ ಸಂಗ್ರಹಣೆಯ ಸಲಕರಣೆಗಳ ರಚನೆ — tools for data collection
6. ಕ್ಷೇತ್ರ ಅಧ್ಯಯನ ಮತ್ತು ಮಾಹಿತಿ ಸಂಗ್ರಹ — Field study and data collection
7. ದತ್ತಾಂಶ ಪರಿಷ್ಕರಣ ಮತ್ತು ಕೋಷ್ಟಕ ರೂಪೀಕರಣ — coding data and tabulation
8. ದತ್ತಾಂಶಗಳ ವಿಶ್ಲೇಷಣೆ ಮತ್ತು ವರದಿ ತಯಾರಿ — Analysis of data and report writing

## Sampling Techniques ನಮೂನೆಯ ವಿಧಾನ

ಸಂಶೋಧಕನು ಸಂಶೋಧನಾ ಅಧ್ಯಯನಕ್ಕಾಗಿ ಕೆಲವೆ ಕೆಲವು ಮಾಹಿತಿದಾರರನ್ನು ಸಂದರ್ಶಿಸಿ ಸಂಗ್ರಹಿಸುವ ಮಾಹಿತಿಗಳಿಗೆ ನಮೂನೆ ದತ್ತಾಂಶಗಳು ಎಂದು ಕರೆಯುತ್ತಾರೆ. ಈ ನಮೂನೆಯ ವಿಧಾನದಿಂದ ಸಂಪೂರ್ಣ ಜನಸಂಖ್ಯೆಯ ಅಭಿಪ್ರಾಯವೆಂಬಂತೆ ದತ್ತಾಂಶಗಳು ಸಂಗ್ರಹಿಸಬೇಕಾಗುತ್ತದೆ. ಈ ನಮೂನೆಯ ವಿಧಾನದಿಂದ ಸಮಯ ಮತ್ತು ಹಣದ ಉಳಿತಾಯವಾಗುತ್ತದೆ. ಮತ್ತು ವೈಜ್ಞಾನಿಕ ಆಧಾರದಲ್ಲಿ ಮರುಪರೀಶಲನೆಗೆ ಅವಕಾಶವನ್ನು ಕೊಡುತ್ತದೆ. ನಮೂನೆಯ ವಿಧಾನನವು ಕಡಿಮೆ ಸಮಯದ ಜೊತೆಗೆ ಕಡಿಮೆ ಶ್ರಮ, ಮಿತವ್ಯಯಕಾರಿ, ಕಡಿಮೆ ಸಂಘಟನಾ ಕೌಶಲ್ಯ ಹೊಂದಿದ್ದು ವೈಜಾನಿಕ ತಳಹದಿಯನ್ನು ಹೊಂದಿರುತ್ತದೆ.

### ನಮೂನೆ ವ್ಯಾಖ್ಯೆಗಳು Definition of the sampling method

ಗುಡ್ ಮತ್ತು ಹ್ಯಾಟ್ ರವರ ಪ್ರಕಾರ: "ನಮೂನೆ ಹೆಸರೆ ಸೂಚಿಸುವುಂತೆ ದೊಡ್ಡ ವಸ್ತುವಿನ ಸಣ್ಣ ಪ್ರತಿರೂಪವಿದ್ದಂತೆ" ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಗಾರ್ಡನ್ ಮಾರ್ಷಲ್‌ರ ಪ್ರಕಾರ: ಬೃಹತ್ ಜನಸಂಖ್ಯೆ ಅಥವಾ ವಿಶ್ವದ ಭಾಗವೊಂದರ ವಿಶ್ಲೇಷಣೆಯ ಮೂಲಕ ಸಮಸ್ತ ಜನಸಂಖ್ಯೆ ಅಥವಾ ವಿಶ್ವದ ಕುರಿತಾಗಿ ಮಾಹಿತಿಯನ್ನು ಸಂಗ್ರಹಿಸುವ ಹಾಗೂ ನಿರ್ಣಯಗಳನ್ನು ಮಾಡುವ ವಿಧನಕ್ಕೆ ಮಾದರಿ ವಿಧಾನ ಎಂದು ಕರೆದಿದ್ದಾರೆ.

### Characteristics of the sampling method ನಮೂನೆಯ ಲಕ್ಷಣಗಳು

ವೈಜ್ಞಾನಿಕ ತಳಹದಿಯನ್ನು ಹೊಂದಿರುವ ನಮೂನೆಯ ಲಕ್ಷಣಗಳು ನಂಬಕೆಗೆ ಅರ್ಹವಾಗಿದ್ದು, ಸವಿಸ್ತಾರವಾದ ಅಧ್ಯಯನವನ್ನು ಮಾಡಲು ಸೂಕ್ತವಾದ ವ್ಯವಸ್ಥೆಯನ್ನು ಕಲ್ಪಿಸುತ್ತದೆ.

| | | |
|---|---|---|
| 1. | ನಂಬಲರ್ಹತೆ | Reliability |
| 2. | ಉಳಿತಾಯ | Economy |
| 3. | ಸವಿಸ್ತಾರವಾದ ಅಧ್ಯಯನ | Detailed study |
| 4. | ವೈಜ್ಞಾನಿಕ ಆಧಾರ | Scientific Base |
| 5. | ಹೆಚ್ಚಿನ ಪರಿಸ್ಥಿತಿಗಳಿಗೆ ಸೂಕ್ತವಾದ ವಿಧಾನ | Greater suitability in most situation |

## ನಮೂನೆಯ ಗುಣಗಳು Qualities of the sampling method

ವೈಜ್ಞಾನಿಕ ಸ್ವರೂಪವನ್ನು ಹೊಂದಿರುವ ನಮೂನೆಯ ಗುಣಗಳು ದೋಷದಿಂದ ಮುಕ್ತವಾಗಿದ್ದು ಬದಲಾವಣೆಗೆ ಸ್ವಾತಂತ್ರ್ಯವನ್ನು ಕಲ್ಪಿಸಿರುವ ಸಾಮಾನ್ಯೀಕರಣ ಮಾಡಲು ಸಾಧ್ಯವಿರುವಂತಹವುಗಳನ್ನು ಈ ಕೆಳಗಿನಂತೆ ಪಟ್ಟಿಮಾಡಬಹುದು

- ಪ್ರಾತಿನಿಧಿಕತೆ
- ಪರಿಪೂರ್ಣತೆ ಮತ್ತು ಅವಲಂಬನಾರ್ಹತೆ
- ನಮೂನೆಯ ದೋಷದಿಂದ ಮುಕ್ತವಾಗಿರಬೇಕು
- ಘಟಕಗಳ ಸ್ವಾತಂತ್ರ್ಯ
- ಏಕರೂಪತೆ ಅಥವಾ ಸಮೈಕ್ಯ

## ನಮೂನೆ ಮೂಲ ಪರಿಕಲ್ಪನೆಗಳು Concepts of the sampling method

| | | |
|---|---|---|
| 1. | ಜನಸಮುದಾಯ | Population |
| 2. | ನಮೂನೆ ವಿನ್ಯಾಸ | Sampling design |
| 3. | ನಮೂನೆಯ ದೋಷ | Sampling fault |
| 4. | ದೃಢನಂಬಿಕೆ & ಪ್ರಾಮುಖ್ಯತೆಯ ಮಟ್ಟ | Importance of sampling |
| 5. | ನಮೂನೆಯ ಹಂಚಿಕೆ | Distribution of samples |
| 6. | ನಮೂನೆಯ ಗಾತ್ರ | Sampling size |
| 7. | ನಮೂನೆಯ ಘಟಕ | Sampling Unit |
| 8. | ನಮೂನೆಯ ತಂತ್ರ | Sampling Technique |

### ನಮೂನೆಯ ವಿಧಾನಗಳು types of the sampling method

ಸಂಭವನೀಯತೆ ತತ್ವದ ಆಧಾರದ ಮೇಲೆ ನಮೂನೆಯ ವಿಧಾನವನ್ನು ಎರಡು ರೀತಿಯಲ್ಲಿ ವಿಭಾಗಿಸಲಾಗಿದೆ. ಅವುಗಳು ಈ ಕೆಳಗಿನಂತಿವೆ

| | |
|---|---|
| 1) ಸಂಭವನೀಯತೆ ಮಾದರಿ ವಿಧಾನ | Probability Sampling |
| 2) ಅಸಂಭವನೀಯತೆ ಮಾದರಿ ವಿಧಾನ | Non Probability Sampling |

## ಸಂಭವನೀಯತೆ ಮಾದರಿ ವಿಧಾನ Probability Sample

ಸಂಭವನೀಯತೆಯ ನಮೂನೆಯು ವಿಶ್ವದ ಪ್ರತಿಯೊಂದು ಘಟಕದ ಜನಸಮೂಹವನ್ನು ಆಯ್ಕೆ ಮಾಡಲು ನಿರ್ದಿಷ್ಟಪಡಿಸಬಹುದು. ಹಾಗೂ ಸಂಭವನೀಯತೆ ಮತ್ತು ಅಸಂಭವನೀಯತೆಗಳನ್ನು ಆಧಾರವಾಗಿಟ್ಟುಕೊಂಡು ನಮೂನೆಗಳನ್ನು ವಿಭಿನ್ನ ಪ್ರಕಾರಗಳಲ್ಲಿ ವಿಂಗಡಿಸಲಾಗಿದೆ.

1. ಸರಳ ಯಾದೃಚಿಕ ನಮೂನೆ ವಿಧಾನ — Simple Random Sample
2. ಕ್ರಮಬದ್ಧ ಯಾದೃಚ್ಛಿಕ ನಮೂನೆ ವಿಧನ — Systematic Random Sample
3. ವಿಭಾಗಿಯ ಶ್ರೇಣಿಕೃತ ಯಾದೃಚ್ಛಿಕ ನಮೂನೆ ವಿಧಾನ — Stratified Random Sample
4. ಗುಚ್ಚ ಮಾದರಿಯ ವಿಧಾನ — Cluster Sample
5. ಬಹುಸ್ಥರ ನಮೂನೆ ವಿಧಾನ — Multistage Sampling

## ಅಸಂಭವನೀಯತೆ Non Probability Sampling

ಅಸಂಭವನೀಯತೆಯ ನಮೂನೆಯು ವಿಶ್ವದ ಪ್ರತಿಯೊಂದು ಘಟಕದ ಜನಸಮೂಹವನ್ನು ಆಯ್ಕೆ ಮಾಡಲು ನಿರ್ದಿಷ್ಟಪಡಿಸಲು ಸಾಧ್ಯವಿರುವುದಿಲ್ಲ. ಬದಲಾಗಿ ಇಲ್ಲಿ ಸಂಶೋಧಕನು ತನ್ನ ಸಂಶೋಧನೆಯ ಅಧ್ಯಯನದ ಘಟಕವನ್ನು ತಾನೆ ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ. ಈ ನಮೂನೆಯಲ್ಲಿ ಸಂಶೋಧಕನ ತೀರ್ಮಾನವೆ ಅಂತಿಮವಾಗಿರುತ್ತದೆ.

1. ಆಕಸ್ಮಿಕ ಮಾದರಿ ನಮೂನೆ — Accidental Sampling
2. ಪ್ರಮಾಣನೀಯ ನಮೂನೆ — Quota Sampling
3. ಉದ್ದೇಶಿತ ನಮೂನೆ ವಿಧಾನ — Purposive Sample
4. ಸಂರ್ಪಕ ಸರಪಣಿ ವಿಧಾನ — Snowball Sample

## Advantages of Sampling Method **ನಮೂನೆ ವಿಧಾನದ ಅನುಕೂಲತೆಗಳು**

ಸಂಶೋಧನೆಯಲ್ಲಿ ಮಾಹಿತಿ ಸಂಗ್ರಹಣೆಯ ಕಾರ್ಯದಲ್ಲಿ ನಮೂನೆಯ ವಿಧಾನವು ಸಹಕಾರಿಯಾಗಿರುವ ಅನುಕೂಲತೆಗಳು ಈ ಕೆಳಗಿನಂತಿವೆ

1. ಕಡಿಮೆ ಸಮಯ ತೆಗೆದುಕೊಳ್ಳುತ್ತದೆ — Less time consuming
2. ಕಡಿಮೆ ಖರ್ಚಿನದು — Involves less cost
3. ಹೆಚ್ಚು ನಂಬಲರ್ಹವಾದ ಫಲಿತಾಂಶಗಳು — More reliable result
4. ಹೆಚ್ಚು ವಿಸ್ತೃತ ಮಾಹಿತಿ ಲಭ್ಯ — Availability of more detailed information
5. ಜನಗಣತಿ ವಿಧಾನದ ನಿಷ್ಕೃಷ್ಟತೆಯನ್ನು ಪರೀಕ್ಷಿಸಲು ನಮೂನೆಯ ವಿಧಾನದ ಅಗತ್ಯ
   (Necessity of the use of sampling method to test the accuracy of the census method)
6. ಕೆಲವು ಸಂದರ್ಭಗಳಲ್ಲಿ ಮಾದರಿ ವಿಧಾನವನ್ನು ಅನುಸರಿಸಲು ಸಾಧ್ಯ
   (Sampling method can be used in some cases)

## ನಮೂನೆ ವಿಧಾನದ ಅನಾನುಕೂಲತೆಗಳು Disadvantages of Sampling Method

ಸಂಶೋಧನೆಯಲ್ಲಿ ಮಾಹಿತಿ ಸಂಗ್ರಹಣೆಯ ಕಾರ್ಯದಲ್ಲಿ ನಮೂನೆಯ ವಿಧಾನವು ಸಹಕಾರಿಯಾಗಿರುವ ಅನುಕೂಲತೆಗಳ ಜೊತೆಗೆ ಅನಾನುಕೂಲತೆಗಳು ಕಂಡುಬರುತ್ತವೆ. ಅವುಗಳು ಈ ಕೆಳಗಿನಂತಿವೆ

- ಮಾದರಿಯ ಆಯ್ಕೆಯಲ್ಲಿನ ಪ್ರಮಾದಗಳು — Error in the selection of Sample
- ಪರಿಣಿತರ ಸಹಾಯದ ಅಗತ್ಯ — Help of the experts needed
- ವಿಶೇಷ ಸಂದರ್ಭಗಲಲ್ಲಿ ತೀರಾ ತೊಡಕಿನದಾಗಲೂಬಹುದು — This often becomes complicated also
- ಎಲ್ಲಾ ವಿಷಯಗಳ ಆಧ್ಯಯನದಲ್ಲಿ ಅಳವಡಿಸಲು ಸಾಧ್ಯವಿಲ್ಲ — Cannot be used in all types of studies

## Primary and Secondary Sources of Data
## ಪ್ರಾಥಮಿಕ ಮತ್ತು ಮಾಧ್ಯಮಿಕ ದತ್ತಾಂಶಗಳು

ಸಾಮಾಜಿಕ ಸಂಶೋಧನೆಯಲ್ಲಿ ಮಾನವ ಸಮಾಜವೆ ಒಂದು ಪ್ರಯೋಗಾಲಯವಾಗಿದ್ದು ತಮ್ಮ ಪ್ರಯೋಗಕ್ಕೆ ಬೇಕಾದ ಮಾಹಿತಿಗಳನ್ನು ಸಂಗ್ರಹಿಸಲು ಸಂಶೋಧಕನು ಸಮೂಹ, ಸಮುದಾಯ ಮತ್ತು ಸಮಾಜಗಳಿಂದ ಜನರನ್ನು ನೇರವಾಗಿ ಅಥವಾ ಅಪ್ರತ್ಯಕ್ಷವಾಗಿ ಅವಲೋಕನ ಅಥವಾ ಸಂದರ್ಶನದ ಮೂಲಕ ಸಂಶೋಧನೆಯ ತಂತ್ರಗಳ ಮೂಲಕ ದತ್ತಾಂಶಗಳನ್ನು ಸಂಗ್ರಹಿಸುತ್ತಾರೆ. ದತ್ತಾಂಶಗಳನ್ನು ಸಂಗ್ರಹಿಸಲು ನಮೂನೆಯ ಮೂಲಕ ಪ್ರತಿನಿಧಿಗಳ ಸಂಖ್ಯೆಗಳನ್ನು ನಿರ್ಧರಿಸುತ್ತಾರೆ. ಹೀಗೆ ನಿರ್ಧರಿಸಿದ ಪ್ರತಿನಿಧಿಗಳಿಂದ ಸಂಗ್ರಹಿಸಿದ ಮಾಹಿತಿಯನ್ನು ಪ್ರಾಥಮಿಕ ದತ್ತಾಂಶಗಳು ಎಂದು ಕರೆಯುತ್ತಾರೆ. ಅದೇ ರೀತಿಯಾಗಿ ಈ ಮೊದಲೆ ಸಂಶೋಧನೆಯ ವಿಷಯದ ಮೇಲೆ ಪ್ರಕಟಗೊಂಡಿರುವ ಮಾಹಿತಿಗಳನ್ನು ಸಂಗ್ರಹಿಸುವದನ್ನು ಅನುಷಂಗಿಕ ದತ್ತಾಂಶಗಳು ಎನ್ನುತ್ತಾರೆ. ಈ ಅಧ್ಯಯನದಲ್ಲಿ ಮಾಹಿತಿ ಸಂಗ್ರಹಣೆಯ ಮೂಲಗಳ ಜೊತೆಗೆ ಮಾಹಿತಿಯನ್ನು ಸಂಗ್ರಹಿಸಲು ಬಳಸುವ ವಿಧಾನಗಳನ್ನು ನೋಡಬಹುದು. ಅವುಗಳೆಂದರೆ ಅವಲೋಕನ, ಪ್ರಶ್ನಾವಳಿ, ಶೆಡ್ಯುಲ್ ಮತ್ತು ಸಂದರ್ಶನ.

## ಮಾಹಿತಿ ಸಂಗ್ರಹಣೆ: Collection of Data

ಸಂಶೋಧನೆಯ ವಿನ್ಯಾಸವನ್ನು ರಚಿಸಿದ ಮೇಲೆ ಸಂಶೋಧಕನು ಅಧ್ಯಯನಕ್ಕೆ ಸಂಬಂಧಿಸಿದ ವಿಷಯಗಳನ್ನು ವಿವಿಧ ಮೂಲಗಳಿಂದ ಸಂಶೋಧನಾ ತಂತ್ರಗಳನ್ನು ಉಪಯೋಗಿಸಿ ವಿಷಯವನ್ನು ಸಂಗ್ರಹಿಸುವ ಕ್ರಮಕ್ಕೆ ಮಾಹಿತಿಗಳ ಸಂಗ್ರಹಣೆ ಅಥಾವ ದತ್ತಾಂಶಗಳ ಸಂಗ್ರಹಣೆ ಎಂದು ಕರೆಯುವರು.

## ಮಾಹಿತಿಗಳನ್ನು ಸಂಗ್ರಹಿಸುವ ಎರಡು ಮೂಲಗಳು
## Sources of data Collection

ಡಬ್ಲ್ಯೂ. ಎ. ಬ್ಯಾಗಲೆ ರವರ ಪ್ರಕಾರ ಸಂಶೋಧನೆಗೆ ಮಾಹಿತಿಗಳನ್ನು ಎರಡು ಮೂಲಗಳಿ ಸಂಗ್ರಹಿಸಬಹುದು ಎಂದಿದ್ದಾರೆ ಅವುಗಳು ಈ ಕೆಳಗಿನಂತಿವೆ.

1. ಪ್ರಾಥಮಿಕ ಮೂಲಗಳು Primary Sources of Data
2. ಅನುಷಂಗಿಕ ಮೂಲಗಳು Primary Sources of Data

**ಪ್ರಾಥಮಿಕ ಮೂಲಗಳು:** ಪ್ರಾಥಮಿಕ ಮೂಲಗಳಿಂದ ಕಲೆ ಹಾಕುವ ದತ್ತಾಂಶಗಳಿಗೆ ಮೂಲ ದತ್ತಾಂಶಗಳು ಎಂದು ಹೆಸರು. ಸಂಶೋಧಕನು ನೇರವಾಗಿ ಮೊದಲ ಬಾರಿಗೆ ಸಂಗ್ರಹಿಸುವ ಮಾಹಿತಿಗಳಿಗೆ ಮೂಲ ದತ್ತಾಂಶಗಳೆಂದು ಹೆಸರು. ಇವು ಕಚ್ಚಾ ರೂಪದಲ್ಲಿರುತ್ತವೆ.

**ಪ್ರಾಥಮಿಕ ದತ್ತಾಂಶಗಳ ಮೂಲ:–** ಸಂಶೋಧಕನು ತಾನು ಕಾರ್ಯಪ್ರವೃತ್ತವಾಗಿರುವ ಕ್ಷೇತ್ರದಿಂದ ತಾನೇ ನೇರವಾಗಿ ಅಥವಾ ತನ್ನ ಸಿಬ್ಬಂದಿ ವರ್ಗದವರ ಮೂಲಕ ತನ್ನ ಸಂಶೋಧನಾ ವಿಷಯಕ್ಕೆ ಸಂಬಂಧಿಸಿದ ದತ್ತಾಂಶವನ್ನು ಸಂಗ್ರಹಿಸುವ ಮಾಹಿತಿಯನ್ನು ಮೂಲಗಳನ್ನು ಪ್ರಾಥಮಿಕ ದತ್ತಾಂಶಗಳು ಎಂದು ಕರೆಯುವರು.

ಸಂಶೋಧನಾ ಕಾರ್ಯಕ್ಕಾಗಿ ಸಂಶೋಧಕನು ಮಾಹಿತಿಯನ್ನು ಸಂಗ್ರಹಿಸಲು ಆಯ್ಕೆ ಮಾಡಿಕೊಂಡಿರುವ ನಮೂನೆಯನ್ನು ನೇರವಾಗಿ ಪ್ರಶ್ನಾವಳಿಗಳ,ಸಂದರ್ಶನ ಮತ್ತು ಅವಲೋಕನದ ಮೂಲಕ ಅಂಚೆಗಳ ಮೂಲಕ ಮಾಹಿತಿಯನ್ನು ಸಂಗ್ರಹಿಸುವುದನ್ನು ಪ್ರಾಥಮಿಕ ಮಾಹಿತಿ ಎಂದು ಕರೆಯುತ್ತಾರೆ.

**ಪ್ರಾಥಮಿಕ ಮಾಹಿತಿ ಸಂಗ್ರಹಿಸುವ ಮೂಲಗಳು:** ಸಂಶೋಧನೆಗೆ ಅವಶ್ಯಕವಾಗಿರುವ ಮಾಹಿತಿಯನ್ನು ಒಂದೇ ವಿಧಾನ ಅಥವಾ ತಂತ್ರದಿಂದ ಸಂಗ್ರಹಿಸದೆ ಹಲವಾರು ದಿಕ್ಕಿನಲ್ಲಿ ಮಾಹಿತಿಯನ್ನು ಸಂಗ್ರಹಿಸಿ ಸಂಶೋಧಕನು ಊಹಿಸಿರುವ ಪರಿಕಲ್ಪನೆಯು ಬಗ್ಗೆ ಪೂರಕವಾದ ವಿಶ್ವಾಸಾರ್ಹತೆಯನ್ನು ಮೂಡಿಸಿ ಲಭ್ಯವಿರುವ ಮಾಹಿತಿಗಳನ್ನು ವಿವಿಧ ಬಗೆಗಳಿಂದ ಸಂಗ್ರಹಿಸಬೇಕಾಗುತ್ತದೆ. ಈ ವಿವಿಧ ರೀತಿಯ ಮಾಹಿತಿಗಳನ್ನು ಸಂಗ್ರಹಿಸಲು ವಿವಿಧ ಬಗೆಯ ವಿಧಾನಗಳನ್ನು ಅಳವಡಿಸಿಕೊಳ್ಳಬೇಕಾಗುತ್ತದೆ. ಹೀಗಾಗಿ ಸಂಶೋಧಕನು ನಾನಾ ತಂತ್ರ ಮತ್ತು ವಿಧಾನಗಳ ಮೂಲಕ ಕ್ಷೇತ್ರಕಾರ್ಯದ ಮೂಲಕ ಸಂಶೋಧನೆಗೆ ಸಂಬಂಧಿಸಿದ ಮಾಹಿತಿಯನ್ನು ಸಂಗ್ರಹಿಸುವುದು ಅನಿವಾರ್ಯವಾಗಿರುವುದರಿಂದ ಮಾಹಿತಿ ಸಂಗ್ರಹಣೆಗೆ ಬಳಸುವ ವಿಧಾನಗಳು ಹಾಗೂ ತಂತ್ರಗಳು ಈ ಕೆಳಗಿನಂತೆ ಪಟ್ಟಿಮಾಡಬಹುದು.

- ಅವಲೋಕನ
- ಪ್ರಶ್ನಾವಳಿ
- ಸಂದರ್ಶನ,
- ಅನುಸೂಚಿ
- ಸಮಾಜಮಾಪನ ಪದ್ದತಿ ಸೋಷಿಯೋಮೆಟ್ರಿ ಮತ್ತು
- ಸಮಗ್ರ ಅಧ್ಯಯನ ವಿಧಾನ ಅಥವಾ ಏಕ ವಿಷಯದ ಅಧ್ಯಯನ ವಿಧಾನ.

**ಕ್ಷೇತ್ರಕಾರ್ಯ :** ಸಾಮಾಜಿಕ ಸಂಶೋಧನೆಯಲ್ಲಿ ಮಾಹಿತಿಯನ್ನು ಸಂಗ್ರಹಿಸುವ ವಿಧಾನವನ್ನು ಕ್ಷೇತ್ರಕಾರ್ಯ ಅಥಾವ ಕ್ಷೇತ್ರ ಅಧ್ಯಯನ ಎನ್ನುವರು. ಸಾಮಾಜಿಕ ಸಂಶೋಧನೆಗಳಲ್ಲಿ ಕ್ಷೇತ್ರಕಾರ್ಯ ವಿಧಾನವನ್ನು ಆರಂಭಿಸಿದ ಕೀರ್ತಿ ಮಾನವಶಾಸ್ತ್ರಜ್ಞರಿಗೆ ಸಲ್ಲುತ್ತದೆ. ಖ್ಯಾತ ಮಾನವ ಶಾಸ್ತ್ರಜ್ಞರಾದ **ಬಿ. ಮ್ಯಾಲಿನೊವಸ್ಕಿಯವರು** ಬರೆದಿರುವ ”Arognauts of the western pacific”by B. Molinowski ಎಂಬ ಗ್ರಂಥದಲ್ಲಿ ಸಾಮಾಜಿಕ ಅ"ಧ್ಯಯನಗಳಲ್ಲಿ ಕ್ಷೇತ್ರಕಾರ್ಯ ವಿಧಾನದ ಮಹತ್ವವನ್ನು ಪ್ರಕಟವಾಗಿರುವುದು ತಿಳಿದುಬರುತ್ತದೆ.

## ಪ್ರಾಥಮಿಕ ಮಾಹಿತಿ ಸಂಗ್ರಹಣೆಯ ವಿಧಾನಗಳು

## Techniques of data Collection

ಕ್ಷೇತ್ರಕಾರ್ಯ ಅಧ್ಯಯನದಲ್ಲಿ ಮಾಹಿತಿ ಸಂಗ್ರಹಣೆಗೆ ಬಳಸುವ ವಿಧಾನಗಳು ಸಂಶೋಧಕನು ತನ್ನ ಸಂಶೋಧನಾ ವಿಷಯದ ವಸ್ತು ವಿಷಯಕ್ಕೆ ಸಂಬಂಧಿಸಿದಂತೆ ಅಥವಾ ವಸ್ತು ವಿಷಯಕ್ಕೆ ಅಗತ್ಯವಾದಂತಹ ವಿಧಾನವನ್ನು ಬಳಸಿ ಮಾಹಿತಿಯನ್ನು ಸಂಗ್ರಹಿಸಬಹುದು. ಅವುಗಳು ಈ ಕೆಳಗಿನಂತಿವೆ.

## ಅವಲೋಕನ: Observation

ಅವಲೋಕನ ಎಂದರೆ ನೋಡುವುದು/ವೀಕ್ಷಿಸುವುದು ಎಂದರ್ಥ. ಇಲ್ಲಿ ಸಂಶೋಧಕನು ಒಂದು ವಸ್ತು ವಿಷಯವನ್ನು ಉದ್ದೇಶಪೂರ್ವಕವಾಗಿ ಗಮನವಿಟ್ಟು ನೋಡುವುದು ಅಥವಾ ವೀಕ್ಷಿಸುವುದನ್ನು ಅವಲೋಕನ ಎನ್ನುತ್ತಾರೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಸಂಶೋಧಕನು ತಾನು ಅಧ್ಯಯನ ಮಾಡಲು ಉದ್ದೇಶಿಸಿದ ಸನ್ನಿವೇಶದಲ್ಲಿ ಭಾಗವಹಿಸಿ ಆ ಸನ್ನಿವೇಶದ ನೈಜ ಚಿತ್ರಣವನ್ನು ವೀಕ್ಷಣೆಯ ಮೂಲಕ ಸಂಗ್ರಹಿಸುವುದುದನ್ನು ಅವಲೋಕನ ಎನ್ನುತ್ತಾರೆ.

## ವ್ಯಾಖ್ಯೆಗಳು

ಸಿ.ವಿ. ಮೋಸರ್–"ಅವಲೋಕನವು ವೈಜ್ಞಾನಿಕ ಅನ್ವೇಷಣೆಗಳನ್ನು ಶಾಸ್ತ್ರೀಯ ವಿಧಾನ ಸ್ಪಷ್ಟವಾಗಿ ಹೇಳುವುದಾದರೆ ಅವಲೋಕನವು ಕಣ್ಣುಗಳನ್ನು ಬಳಸಿ ಆದ ಕ್ರಿಯೆಯಾಗಿದೆ ಎಂದಿದ್ದಾರೆ. ಅವಲೋಕನವು ಘಟನೆಗಳು, ಕಾರ್ಯಕಾರಣಗಳು ಮತ್ತಿತರ ಸ್ಥಿತಿಗಳನ್ನು ಯಥಾರ್ಥವಾಗಿ ವೀಕ್ಷಿಸಿ ವಿಶ್ಲೇಷಿಸಿ ವರ್ಣಿಸುವ ವಿಧಾನಕ್ಕೆ ಅವಲೋಕನ ಎಂದು ಕರೆಯುತ್ತಾರೆ.

## ಅವಲೋಕನದ ವಿಧಾನಗಳು: Methods of Observation

| | |
|---|---|
| 1)ಸಹಭಾಗಿತ್ವ | Participation Observation |
| 2)ಅಸಹಭಾಗಿತ್ವ | NonParticipation Observation |
| 3)ನಿಯಂತ್ರಿತ | Controlled Observation |
| 4)ಅನಿಯತ್ರಿತ | NonControlled Observation |

1)ಸಹಭಾಗಿತ್ವ ಸಂಶೋಧಕನು ಗುಂಪಿನೊಡನೆ ಬೆರೆತು ಅವರ ಜೀವನದಲ್ಲಿ ಭಾಗವಹಿಸಿ ಮಾಹಿತಿಯನ್ನು ಸಂಗ್ರಹಿಸುವ ವಿಧಾನಕ್ಕೆ ಸಹಭಾಗಿತ್ವ ಎನ್ನುವರು. ಇಲ್ಲಿ ಸಂಶೋಧಕನ ತನ್ನ ಉದ್ದೇಶವನ್ನಾಗಲಿ ಅಥವಾ ವ್ಯಕ್ತಿತ್ವವನ್ನಾಗಲಿ ವ್ಯಕ್ತಪಡಿಸದೇ ಅವರಂತೆಯೆ ವೇಷ ಧರಿಸಿ ಅವರಲ್ಲಿ ಒಬ್ಬನಾದಾಗ ಅದು ರಹಸ್ಯ ಸಹಭಾಗಿತ್ವ ಅವಲೋಕನವೆನಿಸುತ್ತದೆ.ಇದು ಸನ್ನಿವೇಷದ ಅಂತದೃಷ್ಟಿ ಮತ್ತು ಬಾಹ್ಯ ದೃಷ್ಟಿ ಎರಡನ್ನು ಒಳಗೊಂಡಿರುತ್ತದೆ.

2)ಅಸಹಭಾಗಿತ್ವ: ಸಂಶೋಧಕನ ಸಮೂಹದಲ್ಲಿ ಭಾಘವಹಿಸದೆ ಹೊರಗಿನಿಂದ ಸಮೂಹದ ರೀತಿ ನೀತಿಗಳನ್ನು ವೀಕ್ಷಿಸುವಂತಹ ವಿಧಾನಕ್ಕೆ ಅಸಹಭಾಗಿತ್ವ ಅವಲೋಕನ ಎನ್ನುವರು. ಸಂಶೋಧಕನು ಅಭ್ಯಸಿಸುತ್ತರುವ ಸನ್ನಿವೇಶದಿಂದ ಹೊರಗಿರುತ್ತಾನೆ ಮತ್ತು ಸ್ಟುಡಿಯೊದಲ್ಲಿ ತೆಗೆದ ಛಾಯಾಚಿತ್ರಗಳಿಗೆ ಹೋಲಿಸಬಹುದು ಮತ್ತು ಚಿಕ್ಕ ಮಕ್ಕಳಿಗೆ ತಮ್ಮನ್ನು ಗಮನಿಸುತ್ತಿರುವ ಅರಿವು ಇರುವುದಿಲ್ಲ.

3)ನಿಯಂತ್ರಿತ ಅವಲೋಕನ– ಇಲ್ಲಿ ಸಂಶೋಧಕನು ತಾನು ವೀಕ್ಷೀಸುವ ಅಂಶವನ್ನು ಅವಲೋಕಿಸಲು ನಿಯಂತ್ರಣಕ್ಕೆ ಒಳಪಡಿಸುತ್ತಾನೆ ಮತ್ತು ಹೊರಗಿನ ಪ್ರಭಾವಗಳಿಗೂ ಒಳಗಾಗುತ್ತವೆ. ಸಂಶೋಧಕನು ಯಾವುದೇ

ಪಕ್ಷಪಾವಿಲ್ಲದೆ ನಿಖರವಾದ ಮಾಹಿತಿಗಳನ್ನು ಸಂಗ್ರಹಿಸಿಕೊಳ್ಳಬಹುದು.ಸಂಶೋಧಕನ ವೀಕ್ಷಣಾ ಶಕ್ತಿ ಚುರುಕಾಗಿರಬೇಕು ವಿಷಯ ಅಥವಾ ವಸ್ತುವಿನ ಮೇಲೆ ಕೇಂದ್ರಿಕೃತವಾಗಿರಬೇಕು. ಇಲ್ಲಿ ರಾಗ–ದ್ವೇಷ , ಭಾವೋದ್ವೇಗಗಳ ಮೇಲೆ ಹತೋಟಿ ಇರಬೇಕು. ಇಲ್ಲಿ ಕಣ್ಣು, ಕಿವಿ ನಂಬುವುದಕ್ಕಿಂತ ಅಳತೆ ಪಟ್ಟಿ ನಕ್ಷೆ ಫೋಟೋಗ್ರಾಫಿ ಒಳ್ಳಿಯದು. ಈ ಅವಲೋಕನದಲ್ಲಿ ಬಳುಸುವ ಸಾಧನಗಳೆಂದರೆ

1) ಟಿಪ್ಪಣಿಗಳು
2) ಛಾಯಾಚಿತ್ರಗಳು
3) ಭೂಪಟಗಳು
4) ಅನುಸೂಚಿಗಳು
5) ಲಿಖಿತ ದಾಖಲೆಗಳು
6) ಧ್ವನಿ ಮುದ್ರಣಗಳು
7) ಅಳತೆ ಪಟ್ಟಿ

ಅನಿಯಂತ್ರಿತ ಅವಲೋಕನ: ಸಂಶೋಧಕನು ಸ್ವಾಭಾವಿಕ ವಿಷಯಗಳನ್ನು ನೇರವಾಗಿ ವೀಕ್ಷಸುವ ಸಮೂಹದ ಸದಸ್ಯರ ಚಟುವಟಿಕೆಗಳನ್ನು ಯಾವುದೇ ರೀತಿಯ ಹೊರಗಿನ ಪ್ರಭಾವಕ್ಕಾಗಲಿ ಅಥವಾ ನಿಯಂತ್ರಣಕ್ಕಾಗಲಿ ಒಳಪಡದೆ ಸಂಶೋಧಕನ ಪರಸ್ಪರ ಸ್ವಾಭಾವಿಕ ಚಟುವಟಿಕೆಗಳನ್ನು ವೀಕ್ಷಸುವ ವಿಧಾನಕ್ಕೆ ಅನಿಯಂತ್ರಿತ ಅವಲೋಕನ ಎನ್ನುತ್ತಾರೆ. ಉದಾ: ಸಂಶೋಧಕನು ಕೊಳಚೆ ಪ್ರದೇಶಗಳಿಗೆ ಭೇಟಿ ನೀಡುವ ಅವಶ್ಯಕತೆಯಿದ್ದರೂ ಅತ ಭೇಟಿ ನೀಡದೆ ಇರುವುದು. ಅಥವಾ ಎಲ್ಲೋ ನಡೆದ ಘಟನೆಗಳ ಆಧಾರದ ಮೇಲೆ ತೀರ್ಮಾನ ಕೈಗೋಳ್ಳಲಾಗುತ್ತದೆ ಅವಲೋಕನವು ಸಂಪೂರ್ಣವಾಗಿ ಪಕ್ಷಪಾತ್ರವಾಗಿರುತ್ತದೆ.

## ಅವಲೋಕನದ ಪ್ರಕಾರಗಳು Typse of Observation

ಸಾಮಾಜಿಕ ಸಂಶೋಧನೆಯಲ್ಲಿ ಸಾಮಾನ್ಯವಾಗಿ ಬಳಕೆಯಾಗುವ ಅವಲೋಕನವನ್ನು 3 ಪ್ರಕಾರಗಳಾಗಿ ವಿಂಗಡಿಸಬಹುದು. ಅವುಗಳು ಈ ಕೆಳಗಿನಂತಿವೆ

1. ಅನಿಯಂತ್ರಿತ ಸಹಭಾಗಿ ಅವಲೋಕನ NonControlled participation Observation
2. ಅನಿಯಂತ್ರಿತ ಅಸಹಭಾಗಿ ಅವಲೋಕನ NonControlled Non participation Observation
3. ಕ್ರಮಬದ್ಧವಾದ ನಿಯಂತ್ರಿಕ ಅವಲೋಕನ Systematic Controlled Observation

ಅನಿಯಂತ್ರಿತ ಸಹಭಾಗಿ ಅವಲೋಕನ:ಸ್ವತ: ಸಂಶೋಧಕನು ಸಾಮಾಜಿಕ ಸನ್ನಿವೇಶ ಅಥವಾ ಪರಿಸ್ಥಿತಿಯೊಂದರ ಮೇಲೆ ನಿಯಂತ್ರಣವನ್ನು ಹೊಂದಿರದೆ ಅಥವಾ ಉದ್ಧೇಶಪೂರ್ವಕ ಪ್ರಭಾವವನ್ನು ಬೀರದೆ ಆ ಸನ್ನಿವೇಶದ ಬಗ್ಗೆ ಮಾಹಿತಿಯನ್ನು ಸಂಗ್ರಹಿಸುವ ಕ್ರಮಕ್ಕೆ ಅನಿಯಂತ್ರಿತ ಸಹಭಾಗಿ ಅವಲೋಕನ ಎನ್ನುತ್ತಾರೆ.

ಎಡ್ವರ್ಡ್ ಸಿ. ಲಿಂಡಮನ್‌ರವರು 1924ರಲ್ಲಿ ಪ್ರಕಟವಾದ ತಮ್ಮ "ಸೋಶಲ್ ದಿಸ್ಕವರಿ" ಎಂಬ ಗ್ರಂಥದಲ್ಲಿ ಸಹಭಾಗಿ ಅವಲೋಕನದ ಬಗ್ಗೆ ಮೊದಲ ಬಾರಿಗೆ ಪ್ರಸ್ತಾಪಿಸಿದ್ದಾರೆ. ಸಮಾಜಶಾಸ್ತ್ರ ಮತ್ತು ಮಾನವಶಾಸ್ತ್ರಗಳ ಅಧ್ಯಯನದಲ್ಲಿ ಈ ವಿಧಾನವು ಹೆಚ್ಚು ಬಳಕೆಯಲ್ಲಿದೆ.

**1) ನಿಕಟ ಸಂಪರ್ಕ ಪಡೆಯುವುದು:** ಒಂದು ಸಾಮಾಜಿಕ ವಿದ್ಯಮಾನ ಅಥವಾ ಸನ್ನಿವೇಶದ ಹಿಂದೆ ಅಡಗಿರುವ ಚಿಂತನೆ ಭಾವನೆ ಮತ್ತು ಕ್ರಿಯೇಗಳ ಅಂತರಾಳವನ್ನು ಅರ್ಥಮಾಡಿಕೊಂಡು ಸಮಸ್ಯೆ ಸವಾಲುಗಳನ್ನು ತಿಳಿದುಕೊಳ್ಳ ಸಂಶೋಧಕನು ಸ್ವತ: ಭಾಗಿಯಾಗಿ ಸಮೂಹದ ಜೊತೆಗೆ ನಿಕಟ ಸಂಪರ್ಕವನ್ನು ಪಡೆಯುತ್ತದೆ.

2) ಆಗಂತುಕನಾಗಿ ಆಗಮಿಸುವುದು:ಸಂಶೋಧಕನು ತನ್ನ ಅಧ್ಯಯನದ ಉದ್ದೇಶ, ಪರಿಸ್ಥಿತಿಯನ್ನು ವಾಸ್ತವಿಕ ಅಗತ್ಯತೆಯನ್ನು ತಿಳಿದುಕೊಂಡು, ಸಮೂಹಕ್ಕೆ ಸದಸ್ಯರಿಗೆ ತನ್ನ ಪರಿಚಯ ಮಾಡಿಕೊಡದೆ, ಅವರ ಆಸೆ–ಆಕಾಂಕ್ಷೆ, ಆಚಾರ ವಿಚಾರಗಳಲ್ಲಿ ಅಭಿಪ್ರಾಯ ಅಭಿರುಚಿಗಳಲ್ಲಿ ಸಹಭಾಗಿಯಾದವರಂತೆ ವರ್ತಿಸಿ, ನೈಜ ಮತ್ತು ನಂಬಲರ್ಹವಾದ ಮಾಹಿತಿಯನ್ನು ಸಂಗ್ರಹಿಸುವುದು.

3)ಅವಲೋಕನಕಾರನಾಗಿರಬೇಕು: ಸಂಶೋಧಕನು ಮಾಹಿತಿಯನ್ನು ಸಂಗ್ರಹಿಸುವ ವಿವಿಧ ಮಜಲುಗಳನ್ನು ತಿಳಿದುಕೊಂಡು ತನ್ನ ಅಧ್ಯಯನದ ಸ್ವರೂಪವನ್ನು ಆಧರಿಸಿ ಕೆಲವೊಮ್ಮೆ ಸಮೂಹದಲ್ಲಿ ಭಾಗಿಯಾಗಿ ಅಥವಾ ಸಮೂಹದಿಂದ ದೂರನಿಂತು ಸದಸ್ಯರ ಅರಿವಿಗೆ ಬಾರದಂತೆಯು ಭಿನ್ನ ಭಿನ್ನವಾದ ಪತ್ರಗಳನ್ನು ತನ್ನ ಅಧ್ಯಯನದ ಉದ್ದೇಶಗಳನ್ನು ಸಾಧಿಸಲು ನಿರ್ವಹಿಸಬೇಕು.

### ಸಹಭಾಗಿ ಅವಲೋಕನಕ್ಕೆ ಅಗತ್ಯವಾದ ಅಂಶಗಳು

1. ಸಂಶೋಧಕನು ಜನಜೀವನ ಭಾಷೆ ಮತ್ತು ಸಂಸ್ಕೃತಿಯೂ ಪರಿಚಯ ಪಡೆದುಕೊಳ್ಳಬೇಕು.
2. ಸಂಶೋಧಕನು ಅವಲೋಕನಕದಕೆ ಸಂಬಂಧಿಸಿದ ಟಿಪ್ಪಣಿಯು ಆಯಾ ದಿನವೇ ಸಿದ್ದಪಡಿಸಿಕೊಳ್ಳಬೇಕು.
3. ಜನರ ವರ್ತನೆಯು ಅವಲೋಕನಕಾರರಿಂದ ಪ್ರಭಾವಿಸಬಾರದು.
4. ಸಮೂಹದಲ್ಲಿ ಭಾಗಿಗಳಾದವರ ಗುರುತನ್ನು ರಹಸ್ಯವಾಗಿಡಬೇಕು.
5. ಕಡಿಮೆ ವೆಚ್ಚದಾಯಕವಾದುದಾಗಿದೆ.
6. ಸಂಶೋಧಕನು ಪ್ರತಿಕ್ರಿಯೆಗಾರರು ಉತ್ತರಿಸುವ ವಿಷಯದ ಜೊತೆಗೆ ಹೇಗೆ ಉತ್ತರಿಸುತ್ತಾನೆಂದು ದಾಖಲು ಮಾಡಿಕೊಳ್ಳಬೇಕು.
7. ಪ್ರಶ್ನಾವಳಿ ಸಹಭಾಗಿತ್ವದಿಂದ ಮಾಹಿತಿಯನ್ನು ಸಂಗ್ರಹಿಸಬಹುದು.
8. ಪ್ರಶ್ನಾವಳಿ ಇಲ್ಲದೆ ವಿಸ್ತೃತವಾಗಿ ಮಾಹಿತಿಯನ್ನು ಸಂಗ್ರಹಿಸಬಹುದು.
9. ಅಪರಿಚಿತರನ್ನು ಭೇಟಿಯಾದಾಗ ಏಕ ಮನಸ್ಸಿನಿಂದ ಮತ್ತು ಲವಲವಿಕೆಯಿಂದ ಪ್ರಶ್ನೆಯನ್ನು ಕೇಳಬೇಕು.

ಅನಿಯಂತ್ರಿತ ಅಸಹಭಾಗಿ ಅವಲೋಕನ: ಸಂಶೋಧಕನು ತಾನು ಅಧ್ಯಯನ ಮಾಡುವ ಸನ್ನಿವೇಶದಲ್ಲಿ ಪ್ರತ್ಯಕ್ಷವಾಗಿ ಭಾಗವಹಿಸದೆ ಅದರಿಂದ ದೂರ ನಿಂತು ಅದನ್ನು ವೀಕ್ಷಿಸುವ ವಿಧಾನಕ್ಕೆ ಅಸಹಭಾಗಿ ಅವಲೋಕನ ಎನ್ನುತ್ತಾರೆ.

ಭಾಗಶ: ಸಹಭಾಗಿತ್ವ ಅವಲೋಕನ ವಿಧಾನ: ಸಮೂಹದ ಚಟುವಟಿಕೆಯನ್ನು ಪರಸ್ಪರ ಮುಜುಗರವಿಲ್ಲದಂತೆ ಬೇಕಾಗುವ ಸಮಯದವರೆಗೂ ವೀಕ್ಷಿಸಬಹುದು. ಈ ವಿಧಾನವನ್ನು ಮೊದಲು ಲಿಪ್ಲೆಯವರು ಒಂದು ಶತಮಾನದ ಹಿಂದೆಯೆ ಅಂದರೆ ಯೂರೋಪಿನ ಶ್ರಮಿಕ ಕುಟುಂಬಗಳನ್ನು ಅಧ್ಯಯನ ಮಾಡುವಲ್ಲಿ ಬಳಸಿದ್ದರು.

## ಅಸಹಭಾಗಿತ್ವ ಅವಲೋಕನ ವಿಧಾನದ ಅನುಕೂಲತೆಗಳು

ಹೆಚ್ಚು ವಸ್ತುನಿಷ್ಟವಾದುದು: ಸಮೂಹಕ್ಕೂ ಸಂಶೋಧಕನಿಗೂ ಸಂಬಂಧವಿರುವುದಿಲ್ಲ .ಪಕ್ಷಪಾತ, ವೈಯಕ್ತಕ ಭಾವ ಇರುವುದಿಲ್ಲ.,ವ್ಯಕ್ತಿ ಅಪರಿಚಿತನಾಗಿರುವುದರಿಂದ ನೈಜವಾದ ಮಾಹಿತಿಯನ್ನು ಸಂಗ್ರಹಿಸಬಹುದು ಮತ್ತು ದೂರನಿಂತು ತೆರೆದ ಮನಸ್ಸಿನಿಂದ ಮಾಹಿತಿಯನ್ನು ಸಂಗ್ರಹಿಸಬಹುದು. ಅವಲೋಕನಕಾರ ಹೊರಗಿನವನಾಗಿರುವುದರಿಂದ ಆತನೊಂದಿಗೆ ಮುಕ್ತವಾಗಿ ಮಾತನಾಡಬಹುದು.

## ಅಸಹಭಾಗಿತ್ವ ಅವಲೋಕನ ವಿಧಾನದ ಅನಾನುಕೂಲತೆಗಳು

- ಈ ಅಸಹಭಾಗಿತ್ವ ಅವಲೋಕನವು ಔಪಚಾರಿಕ ಸಂದರ್ಭಗಳಿಗೆ ಹಾಗೂ ಸಂಘಟನೆಗಳಿಗೆ ಮಾತ್ರ ಸೀಮಿತವಾಗಿದೆ.
- ಹೊರಗಡೆ ಅಪರಿಚಿತವಾಗಿರುವುದರಿಂದ ಸಂಶೋಧಕನು ವರ್ತನೆಯನ್ನು ಸಮಗ್ರವಾಗಿ ಅರ್ಥೈಸಿಕೊಳ್ಳಲು ಸಾಧ್ಯವಿಲ್ಲ.

## ಕ್ರಮಬದ್ಧವಾದ ನಿಯಂತ್ರಿತ ಅವಲೋಕನ

ಒಂದು ಯೋಜಿತ ಹಾಗೂ ವ್ಯವಸ್ಥಿತ ರೀತಿಯ ಹಲವಾರು ಉಪಕರಣಗಳನ್ನು ಬಳಸಿ ಅವಲೋಕನಾ ಕ್ರಿಯೆಯನ್ನು ನಡೆಸುವ ಕ್ರಮಕ್ಕೆ ನಿಯಂತ್ರಿತ ಅವಲೋಕನ ಎಂದು ಕರೆಯುತ್ತಾರೆ.

ಇಲ್ಲಿ ಅವಲೋಕನಕಾರನು ತನ್ನನ್ನು ಥನು ಕೆಲವು ನಿರ್ಬಂಧನೆಗಳಿಗೆ ಒಳಪಡಿಸಿಕೊಂಡು ಅವಲೋಕಿತರ ಕಾರ್ಯಚಟುವಟಿಕೆಗಳು ನಿರಾಂತಕವಾಗಿ ನಡೆಯಲು ಅನುವು ಮಾಡಿಕೊಡುತ್ತವೆ. ಇಲ್ಲಿ ಅವಲೋಕನಕಾರನು ಮಾಹಿತಿಯನ್ನು ಸಂಗ್ರಹಿಸುವ ಕಾರ್ಯದಲ್ಲಿ ಯಾವುದೆ ನಿಭಂಧನೆಗೆ ಒಳಪಟ್ಟಿರುವುದಿಲ್ಲ. ವೈಯಕ್ತಿಕ ಧ್ಯೇಯೋದ್ಧೇಶಗಳು ದೃಷ್ಟಿಕೋನಗಳು ಹಾಗೂ ಆತನ ಗ್ರಹಣಶಕ್ತಿಯು ಇತಿಮಿತಿಗಳು ಅವಲೋಕನದ ಮೇಲೆ ಪ್ರಭಾವ ಬೀರದಂತೆ ಸಂಶೋಧಕನು ಎಚ್ಚರಿಕೆ ವಹಿಸಬೇಕು. ಅಗತ್ಯಬಿದ್ದರೆ ಧ್ವನಿಮುದ್ರಿಸಿಕೊಳ್ಳುವ, ಅಗತ್ಯವಿದ್ದರೆ ನಕಾಶೆಗಳನ್ನು ಮತ್ತು ಸಮಾಜಮಾಪನ ತಂತ್ರಗಳನ್ನು ಬಳಸಿಕೊಳ್ಳುವ ಪ್ರಯತ್ನ ಮಾಡಬೇಕಾಗುತ್ತದೆ. ಹೀಗಾಗಿ ಸಂಶೋಧಕನು ತನ್ನ ಮೇಲೆ ತಾನೆ ನಿಯಂತ್ರಣ ಹೇರಿ ಅಧ್ಯಯನ ವಸ್ತುವಿನ ಮೇಲೆ ಯಾವುದೇ ರೀತಿಯ ನಿಯಂತ್ರಣ ಹೇರದೆ ಅವಲೋಕಿಸಬೇಕಾಗುತ್ತದೆ.

## ಪ್ರಶ್ನಾವಳಿ QUESTIONNAIRE

ಪ್ರಶ್ನಾವಳಿಯು ಮಾಹಿತಿ ಸಂಗ್ರಹಣೆಯ ಸಾಧನ, ತಂತ್ರ ಅಥವಾ ವಿಧಾನವಾಗಿದೆ. ಮುದ್ರಿತ ಅಥವಾ ಟೈಪ್ ಮಾಡಿದ ಪ್ರಶ್ನೆಗಳ ಪಟ್ಟಿಯನ್ನು ಪ್ರಶ್ನಾವಳಿ ಎಂದು ಕರೆಯುತ್ತಾರೆ. ಪ್ರಶ್ನಾವಳಿಯನ್ನು ಮೌಖಿಕ ಸಂದರ್ಶನ್, ಅಂಚೆ ಮೂಲಕವು ಮಾಹಿತಿಯನ್ನು ಸಂಗ್ರಹಿಸಬಹುದು. ಈ ಪ್ರಶ್ನಾವಳಿಗಳು ಮಾನವನ ವೈಯಕ್ತಿಕ ಅಭಿಪ್ರಾಯಗಳು ಮನೋಭಾವನೆಗಳು, ನಂಬಿಕೆಗಳು ಹಾಗೂ ಅಭ್ಯಾಸಗಳ ಬಗ್ಗೆ ಬಿಡಿಬಿಡಿಯಾಗಿ ಮಾಹಿತಿಯನ್ನು ಸಂಗ್ರಹಿಸುವ ಸಾಧನವಾಗಿದೆ.

## ವ್ಯಾಖ್ಯೆಗಳು DEFINITION OF QUESTIONNAIRE

**ಗೂಡೆ ಮತ್ತು ಹ್ಯಾಟ್ ರವರ ಪ್ರಕಾರ:** " ಪ್ರಶ್ನೆಗಳಿಗೆ ಉತ್ತರಗಳನ್ನು ಸಂಗ್ರಹಿಸುವ ಒಂದು ತಂತ್ರ ಸಾಧನವಾಗಿದ್ದು ಇದರಲ್ಲಿ ಬಳಸಲ್ಪಡುವ ಪ್ರಶ್ನೆಗಳ ಫಾರ್ಮನ್ನು ಮಾಹಿತಿ ನೀಡುವವನು ತಾನೆ ಸ್ವತ: ಭರ್ತಿ ಮಾಡಿಕೊಡುತ್ತಾನೆ."

**ವಾಲ್ಲೇಸ್ ಮತ್ತು ವಾಲ್ಲೇಸ್:** ಮುದ್ರಿತ ಪ್ರಶ್ನೆಗಳಿಗೆ ಮಾಹಿತಿ ನೀಡುವವರಿಂದಲೆ ಉತ್ತರಗಳನ್ನು ಸ್ವಯಂ ಪ್ರೇರಿತರಾಗಿ ಭರ್ತಿ ಮಾಡಿಸಿ ಪಡರಯುವುದರ ಮೂಲಕ ಮಾಹಿತಿ ಸಂಗ್ರಹಿಸುವ ವಿಧಾನವೇ ಪ್ರಶ್ನಾವಳಿ' ಎಂದು ಕರೆದಿದ್ದಾರೆ.

### ಶೈಕ್ಷಣಿಕ ಸಾಮಾಜಿಕ ಸಂಶೋಧನೆಯಲ್ಲಿ ಪ್ರಶ್ನಾವಳಿ

ಅವಲೋಕನ, ಸಂದರ್ಶನ, ಪರೀಕ್ಷಣಗಳು, ಸಮಾಜಮಿತಿಗಳನ್ನು ಸಾಧನ ತಂತ್ರಗಳನ್ನಾಗಿ ಬಳಸುತ್ತಾರೆ. ಪ್ರಶ್ನಾವಳಿ ವಿಧಾನದಲ್ಲಿ ಸಂಶೋಧಕನು ಖುದ್ದಾಗಿ ಹಾಜರಾಗಿ ಅಥವಾ ಹಾಜರಾಗದೆ ಮಾಹಿತಿಗಳನ್ನು ಸಂಗ್ರಹಿಸುತ್ತದೆ. ಸಂದರ್ಶನ ವಿಧಾನದಲ್ಲಿ ಸಂಶೋಧಕನು ತಾನೆ ಮಾಹಿತಿಗಳನ್ನು ಸಂಗ್ರಹಿಸುತ್ತಾನೆ. ಈ ಎರಡು ವಿಧಾನಗಳಲ್ಲಿ ಒಂದೆ ವಿಧವಾದ ಪ್ರಶ್ನೆಗಳ ಪಟ್ಟಿಯನ್ನು ಉಪಯೋಗಿಸಬಹುದು.

## ಪ್ರಶ್ನಾವಳಿಯಲ್ಲಿ ಎರಡು ಪ್ರಕಾರಗಳು TYPES OF QUESTIONNAIRE

1. ಪೂರ್ವರಚಿತ ಪ್ರಶ್ನಾವಳಿ
2. ಅರಚಿತ ಪ್ರಶ್ನಾವಳಿ

**1. ಪೂರ್ವರಚಿತ ಪ್ರಶ್ನಾವಳಿ:** ಸಂಶೋಧಕನು ತನ್ನ ವಿಷಯಕ್ಕೆ ಸಂಭಂಧಿಸಿದಂತೆ ಮಾಹಿತಿ ಸಂಗ್ರಹಿಸುವ ವಿಷಯಗಳನ್ನು ಆಧರಿಸಿ ಪ್ರಶ್ನೆಗಳನ್ನು ತಯಾರಿಸಿ ಪ್ರತಿಕ್ರಿಯೆಗಾರರಲ್ಲಿಗೆ ಹೋದಾಗ ಮುಖಾಮುಖಿ ಭೇಟಿಯಾದಾಗ ಈ ಪ್ರಶ್ನೆಗಳನ್ನು ಕೇಳುವುದರ ಮೂಲಕ ಮಾಹಿತಿಯನ್ನು ಸಂಗ್ರಹಿಸುತ್ತಾರೆ. ಹೀಗೆ ಮಾಹಿತಿ ಸಂಗ್ರಹಿಸುವ ಕ್ಷೇತ್ರಕ್ಕೆ ಹೋಗುವ ಮುಖ್ಯ ಪ್ರಶ್ನೆಗಳನ್ನು ತಯಾರಿಸಿರುವುದನ್ನೆ ರಚಿತ ಪ್ರಶ್ನಾವಳಿ ಎನ್ನುತ್ತಾರೆ.

2. ಅರಚಿತ ಪ್ರಶ್ನಾವಳಿ: ಇಲ್ಲಿ ಸಂಶೋಧಕನು ವಿಷಯಕ್ಕೆ ಸಂಬಂಧಿಸಿದ ವಿಷಯಗಳನ್ನು ಆಧರಿಸಿ ಪ್ರಶ್ನಾವಳಿಯನ್ನು ರಚನೆ ಮಾಡಿರುವುದಿಲ್ಲ. ಸಂದರ್ಶನದ ಅವಶ್ಯಕತೆಗೆ ತಕ್ಕಂತೆ ಪ್ರಶ್ನೆಗಳನ್ನು ರಚಿಸಿ, ರೂ, ರೇಷೆ, ಭಾಷೆಯ ಕ್ರಮವನ್ನು ತಯಾರಿಸಲಾಗುವುದು. ಮಾಹಿತಿದಾರರು ಮಾಹಿತಿ ನೀಡಿದಂತೆ ಸಂಶೋಧಕನು ಟಿಪ್ಪಣಿ ಮಾಡಿಕೊಳ್ಳುವರು. ಉದಾ: ಸಿನೆಮಾ ನೋಡಲು ಇಷ್ಟವಿದೆಯೆ?ವಾರದಲ್ಲಿ ಎಷ್ಟು ಸಿನಿಮಾ ನೋಡುವಿರಿ?

ಪ್ರಶ್ನಾವಳಿಯ ಭೌತಿಕ ರೂಪ: ಪ್ರಶ್ನಾವಳಿಯ ಧ್ವನಿಯು ಒಂದು ನಿರ್ದಿಷ್ಟ ವಿಷಯದ ಕುರಿತು

ಪ್ರಶ್ನಾವಳಿಯ ಶಬ್ದಗಳು: ಸಂಶೋಧಕರು ರಚಿಸಿದ ಪ್ರಶ್ನೆಗಳ ಭಾಷೆ ಶಬ್ದಗಳು ನೇರ ಮತ್ತು ಸ್ಪಷ್ಟವಾಗಿರಬೇಕು.

ಪ್ರಶ್ನಾವಳಿಯ ಅನುಕೂಲತೆಗಳು ADVANTAGES OF QUESTIONNAIRE

1) ಕಾಲ ಮತ್ತು ಹಣದ ಉಳಿತಾಯ
2) ವಸ್ತುನಿಷ್ಠತೆ
3) ಉತ್ತರಗಳ ಏಕರೂಪತೆ
4) ಸಮೀಕ್ಷೆಗೆ ಸೂಕ್ತ ವಿಧಾನವಾಗಿರುತ್ತದೆ.
5) ಮುಕ್ತ ವಾತಾವರಣಕ್ಕೆ ಅವಕಾಶ
6) ಉತ್ತರಿಸಲು ಕಾಲಾವಕಾಶವಿರುವುದು
7) ಉತ್ತರಿಸುವವನು ಅನಾಮಧೇಯನಾಗಿರುತ್ತಾನೆ.
8) ಉತ್ತರಗಳ ಕ್ರೋಢೀಕರಣ ಮತ್ತು ವರ್ಗೀಕರಣ ಸುಲಭವಾಗಿರುತ್ತವೆ.
9) ಉತ್ತಿಸುವಾತನ ಭಾವನಾತ್ಮಕತೆಯ ಮೇಲೆ ಒತ್ತಡವಿರುವುದಿಲ್ಲ
10) ವೈಯಕ್ತಿಕವಾದ ವಿಷಯಗಳಿಗೆ ಸಂಬಂಧಿಸಿದಂತೆ ಮಾಹಿತಿಯನ್ನು ಪಡೆಯುಲು ಸೂಕ್ತ.

ಪ್ರಶ್ನಾವಳಿಯ ಅನಾನುಕೂಲತೆಗಳು DISADVANTAGES OF QUESTIONNAIRE

1) ಅನಕ್ಷರತೆಯ ಸಮಸ್ಯೆ
2) ಮರಳಿ ಬಾರದ ಪ್ರಶ್ನಾವಳಿ
3) ಪ್ರಶ್ನೆಗಳ ಬಗ್ಗೆ ಸ್ಪಷ್ಟೀಕರಣಕ್ಕೆ ಅವಕಾಶವಿಲ್ಲ
4) ಸಂದರ್ಭೋಚಿತವಾಗಿ ಮಾರ್ಪಾಡುಗಳಿಗೆ ಅವಕಾಶವಿಲ್ಲ
5) ಅವಲೋಕನಕ್ಕೆ ಅವಕಾಶವಿಲ್ಲ
6) ತಕ್ಷಣ ಪ್ರತಿಕ್ರಿಯೆಗೆ ಅವಕಾಶವಿಲ್ಲ
7) ನಾನಾ ಬಾಷೆಗಳ ಸಮಸ್ಯೆ
8) ಅಪೂರ್ಣ ಉತ್ತರಗಳು ಸಮಸ್ಯೆ
9) ಅಸ್ಪಷ್ಟ ಕೈಬರಹಗಳು ಸಮಸ್ಯೆ

## ಅನುಸೂಚಿ SCHEDULED

ಅನುಸೂಚಿ ಅಥವಾ ಶೆಡ್ಯೂಲ್ ಎಂಬುದು ಪ್ರಶ್ನಾವಳಿಯ ಇನ್ನೊಂದು ರೂಪ. ಇದು ಕೂಡ ಪೂರ್ವತಯಾರಿತ ಪ್ರಶ್ನೆಗಳ ಮಾಲಿಕೆ ಯಾಗಿದ್ದು ಇಲ್ಲ ಸಂಶೋಧಕನು ಪ್ರಶ್ನೆಗಳ ಮಾಲಿಕೆಯನ್ನು ತನ್ನ ಜೊತೆಗೆ ತೆಗೆದುಕೊಂಡು ಹೋಗಿ ತಾನೆ ಸ್ವತ: ಸಂದರ್ಶಕರಿಗೆ ಭೇಟಿ ಮಾಡಿ ಪಟ್ಟಿ ಮಾಡಿದ ಪ್ರಶ್ನೆಗಳನ್ನು ಕ್ರಮಬದ್ಧವಾಗಿ ಕೇಳಿ ಉತ್ತರಗಳನ್ನು ಪಡೆದು ಪ್ರತ್ಯೇಕ ಕಾಗದದ ಹಾಳೆಯಲ್ಲಿ ಭರ್ತಿಮಾಡುತ್ತಾನೆ. ಕೆಲವು ಸಲ ಅನುಸೂಚಿಯಲ್ಲಿಯ ಭರ್ತಿಮಾಡುತ್ತಾನೆ. ಮತ್ತೆ ಕೆಲವು ಸಲ ಅನುಸೂಚಿಯನ್ನು ಸಂದರ್ಶಕರಿಗೆ ಭರ್ತಿಮಾಡಲು ನೀಡಿ ಅವರುಗಳಿಗೆ ಅರ್ಥವಾಗದ ಪ್ರತಶ್ನೆಗಳಿಗೆ ಸ್ಪಷ್ಟೀಕರಣ ನೀಡುತ್ತಾನೆ.

## ವ್ಯಾಖ್ಯೆಗಳು DEFINITION OF SCHEDULED

ಗೂಡೆ ಮತ್ತು ಹ್ಯಾಟ್ ರವರ ಪ್ರಕಾರ: ಇನ್ನೊಬ್ಬ ವ್ಯಕ್ತಿಯೊಡನೆ ನಡೆಯುವ ಮುಖಾ ಮುಖಿ ಭೇಟಿಯಲ್ಲಿ ಸಂದರ್ಶನಕಾರ ತಾನೆ ಸ್ವತ: ಪ್ರಶ್ನೆಗಳನ್ನು ಕೇಳುವ ಮತ್ತು ಉತ್ತರಗಳನ್ನು ಬರೆದುಕೊಳ್ಳುವ ಒಂದು ಪ್ರಶ್ನೆಗಳ ಮಾಲಿಕೆಯನ್ನು ಸೂಚಿಸಲು ಸಾಮಾನ್ಯವಾಗಿ ಅನುಸೂಚಿಯನ್ನು ಬಳಸುತ್ತಾರೆ ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಜಿ. ಎ ಲುಂಡಬರ್ಗ್‌ರವರ ಪ್ರಕಾರ:ಅನುಸೂಚಿಯು ನಮ್ಮ ಅವಲೋಕನವನ್ನು ಹೆಚ್ಚು ತೀವ್ರಗೊಳಿಸಲು ಒಂದೆ ಸಮಯಕ್ಕೆ ಒಂದೋಂದೆ ಮೂಲಾಂಶವನ್ನು ಪ್ರತ್ಯೇಕಗೊಳಿಸಲು ಬಳಸಲಾಗುವ ತಂತ್ರ ವಿಧಾನವಾಗಿದೆ" ಎಂದಿದ್ದಾರೆ.

## ಅನುಸೂಚಿಯ ಪ್ರಕಾರಗಳು TYPES OF SCHEDULED

ಮಾಹಿತಿ ಸಂಗ್ರಹಿಸುವ ವಿಧಾನವಾದ ಅನುಸೂಚಿಯ ವಿವಿಧ ರೀತಿಯಲ್ಲಿ ಸಿದ್ಧಗೊಳಿಸಬಹುದಾದುದರಿಂದ ಅವುಗಳನ್ನು ಹಲವು ರೀತಿಯಲ್ಲಿ ವರ್ಗೀಕರಿಸಬಹುದು. ಪೌಲಿನ ಯಂಗ್‌ರವರು ಉಲ್ಲೇಖಿಸಿರುವ 4 ಪ್ರಕಾರಗಳು ಕೆಳಗಿನಂತಿವೆ.

1) ಮೌಲಿನ ಅನುಸೂಚಿ
2) ಅವಲೋಕನ ಅನುಸೂಚಿಗಳು
3) ಕಾಗದ ಪತ್ರ/ದಾಖಲೆ ಪತ್ರಗಳ ಅನುಸೂಚಿ
4) ಸಾಂಸ್ಥಿಕ ಸಮೀಕ್ಷೆ ಅನುಸೂಚಿ ಅಥವಾ ಮೌಲ್ಯಮಾಪಕ ಅನುಸೂಚಿ
5) ಸಂದರ್ಶನ ಅನುಸೂಚಿ

## ಅನುಸೂಚಿಯ ಅನುಕೂಲತೆಗಳು ADVANTAGES OF SCHEDULED

ಅನುಸೂಚಿಯು ಮಾಹಿತಿ ಸಂಗ್ರಹಣೆಯ ವಿಧಾನವಾಗಿದ್ದು ಅದರದೆ ಆದ ಅನುಕೂಲತೆಗಳನ್ನು ಹೊಂದಿದೆ. ಅವುಗಳು ಈ ಕೆಳಗಿನಂತಿವೆ.

1) ಅನಕ್ಷರಸ್ಥರಿಂದಲೂ ಮಾಹಿತಿ ಸಂಗ್ರಹಣೆ ಸಾಧ್ಯ
2) ಎಲ್ಲಾ ಪ್ರಶ್ನೆಗಳಿಗೆ ಉತ್ತರ ಪಡೆಯಲು ಸಾಧ್ಯ
3) ಮಾಹಿತಿಯು ಹೆಚ್ಚು ವಿಶ್ವಾಸಾರ್ಹವಾಗಿರುವ ಸಾದ್ಯತೆ

## ಅನುಸೂಚಿಯ ಅನಾನುಕೂಲತೆಗಳು DISADVANTAGES OF SCHEDULED

ಅನುಸೂಚಿಯು ಮಾಹಿತಿ ಸಂಗ್ರಹಣೆಯ ವಿಧಾನವಾಗಿದ್ದು ಅದರದೆ ಆದ ಅನುಕೂಲತೆಗಳನ್ನು ಹೊಂದಿರುವಂತೆ ಅನಾನುಕೂಲತೆಗಳು ಹೊಂದಿರುತ್ತವೆ. ಅವುಗಳು ಈ ಕೆಳಗಿನಂತಿವೆ.

1) ದುಬಾರಿಯಾದುದ್ದು
2) ಸಂದರ್ಶಕರ ಮೇಲಿನ ಅವಲಂಬನೆ
3) ಸಂದರ್ಶಕರಿಗೆ ಸೂಕ್ತ ತರಬೇತಿ ನೀಡಬೇಕಾದ ಅನಿವಾರ್ಯತೆ
4) ವೈವಿಧ್ಯಮಯ ಸಂದರ್ಶನದ ಪರಿಣಾಮ

## SECONDARY SOURCES OF DATA ಅನುಷಂಗಿಕ ಮೂಲಗಳು

ಈ ಮೊದಲೆ ಸಂಶೋಧಕರಿಂದ ಅಥವಾ ಇತರ ಮೂಲಗಳಿಂದ ಪ್ರಕಟಗೊಂಡಿರುವ ಮಾಹಿತಿಯನ್ನು ಕಲೆ ಹಾಕುವ ದತ್ತಾಂಶಗಳಿಗೆ ಅನುಷಂಗಿಕ ದತ್ತಾಂಶಗಳು ಎಂದು ಹೆಸರು. ಅಥವಾ ಸಿದ್ಧರೂಪದಲ್ಲಿ ಲಭ್ಯವಾಗುವ ಮಾಹಿತಿಗಳಿಗೆ ಅನುಷಂಗಿಕ ದತ್ತಾಂಶಗಳೆಂದು ಹೆಸರು. ಉದಾ: ಅನುಷಂಗಿಕ ದತ್ತಾಂಶಗಳನ್ನು ದಿನಪತ್ರಿಕೆ, ಸಾಪ್ತಾಹಿಕ, ಮಾಸಿಕ, ಸರಕಾರೀ ಮತ್ತು ಸಾಂಸ್ಥಿಕ ಪ್ರಕಟಣೆಗಳು, ವೈಯಕ್ತಿಕ ದಾಖಲೆಗಳು ಮತ್ತು ಸಾಂಸ್ಥಿಕ ದಾಖಲೆಗಳೂ ಅನುಷಂಗಿಕ ದತ್ತಾಂಶಗಳ ಮೂಲಗಳಾಗಿವೆ.

ಸಂಶೋಧಕನು ತನ್ನ ಸಂಶೋಧನೆಗೆ ಬೇಕಾಗುವ ದತ್ತಾಂಶಗಳನ್ನು ಪರೋಕ್ಷವಾಗಿ ಬೇರೆ ಬೇರೆ ಮೂಲಗಳಿಂದ ಸಂಗ್ರಹಿಸುವರು ಉದಾಹರಣೆಗೆ ದಸ್ತಾವೇಜು, ಘಟನೆಗಳ ದಾಖಲೆಗಳು, ವೈಯಕ್ತಿಕ ದಾಖಲೆಗಳು, ಸಾರ್ವಜನಿಕ ದಾಖಲೆಗಳು ಮುಂತಾದವುಗಳನ್ನು ಅನುಷಂಗಿಕ ಮೂಲಗಳು ಎಂದು ಕರೆಯುತ್ತಾರೆ. ಸಂಶೋಧನಾ ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರೀ ಹಾಗೂ ಖಾಸಗೀ ಸಂಸ್ಥೆಗಳಲ್ಲಿ ದೊರೆಯುವ ಗ್ರಂಥಗಳು, ನಿಯತಕಾಲಿಕೆಗಳು, ದಾಖಲೆಗಳು, ವ್ಯಕ್ತಿಗತ ಜೀವನಕ್ಕೆ ಸಂಬಂಧಿಸಿದ ಕಾಗದ ಪತ್ರಗಳು, ದಿನಚರಿಗಳು, ಜೀವನ ಚರಿತ್ರೆಗಳು, ಅಪ್ರಕಟಿತ ಪ್ರಬಂಧಗಳು, ಪುಸ್ತಕಗಳು, ಮತ್ತಿತರ ಮೂಲಗಳಿಂದ ಲಭ್ಯವಾಗುವ ಮಾಹಿತಿಯನ್ನು ಅನುಷಂಗಿಕ ಮಾಹಿತಿ ಎನ್ನಲಾಗುವುದು

## ಅನುಷಂಗಿಕ ಮೂಲಗಳು ಎರಡು ರೀತಿಯ ಪ್ರಕಾರಗಳು
## TYPES OF SECONDARY DATA SOURCES

ಸಾಮಾಜಿಕ ಸಂಶೋಧನೆಯಲ್ಲಿ ಬಳಸಲಾಗುವ ಅನುಷಂಗಿಕ ಮೂಲಗಳನ್ನು ಬಳಕೆಯ ಆಧಾರದ ಮೇಲೆ ಎರಡು ರೀತಿಯಾಗಿ ವರ್ಗೀಕರಿಸಲಾಗಿದೆ. ಅವುಗಳು ಈ ಕೆಳಗಿನಂತಿವೆ.

1. ವೈಯಕ್ತಿಕ ಮೂಲಗಳು
2. ಸಾರ್ವಜನಿಕ ಮೂಲಗಳು

## ವೈಯಕ್ತಿಕ ಮೂಲಗಳು PERSONAL DATA SOURCES

ವ್ಯಕ್ತಿಯೊಬ್ಬರು ತನ್ನ ಜೀವನದ ಬೇರೆ ಬೇರೆ ಉದ್ದೇಶಗಳಿಗಾಗಿ ದಾಖಲಿಸಿಕೊಂಡಿರುವ ಪ್ರಕಾಶಿತವಾದ ಅಥವಾ ಪ್ರಕಾಶಿತವಾಗದಿರುವ ಎಲ್ಲಾ ಬಗೆಯ ಮಾಹಿತಿಗಳು ವ್ಯಕ್ತಿಯ ನಂಬಿಕೆ, ಕ್ರೀಯೆಗಳು, ನಂಬಿಕೆಗಳು ಮೌಲ್ಯಗಳು, ಹಾಗೂ ಅನುಭವಗಳನ್ನು ಆಧರಿಸಿರುತ್ತವೆ. ಈ ವೈಯಕ್ತಿಕ ದಾಖಲುಗಳಲಲಿ 4 ಪ್ರಕಾರಗಳು

1. ಜೀವನಚರಿತ್ರೆ
2. ದಿನಚರಿ
3. ಪತ್ರಗಳು
4. ಘಟನೆಗಳ ಲಿಖಿತಗಳು

## ಸಾರ್ವಜನಿಕ ಮೂಲಗಳು PUBLIC DATA SOURCES

ಒಂದು ಘಟನೆ ಅಥವಾ ಪ್ರಸಂಗಕ್ಕೆ ಸಂಬಂಧಿಸಿದಂತೆ ಸರ್ಕಾರಿ ಅಥವಾ ಸರ್ಕಾರೇತರ ಕಚೇರಿಗಳು ಹಾಗೂ ಸಂಘ ಸಂಸ್ಥೆಗಳು ಲಿಖಿತ ರೂಪದಲ್ಲಿರುವ ದಾಖಲೆಗಳನ್ನು ಸಾರ್ವಜನಿಕ ಸ್ವರೂಪದ ದಾಖಲೆಗಳು ಎನ್ನುತ್ತಾರೆ. ಈ ದಾಖಲೆಗಳನ್ನು ರಚಿಸಲು ಸ್ವಪ್ರೇರಣೆಯಿರದೆ ಅದರದೆ ಆದ ನಿರ್ದಿಷ್ಟವಾದ ಉದ್ದೇಶವಿರುತ್ತದೆ. ಈ ದಾಖಲೆಗಳು ದಿನನಿತ್ಯದ ಕಾರ್ಯಚಟುವಟಿಕೆಗಳನ್ನು ದಾಖಲಿಸಿ, ಆಯಾ ಅವಧಿಯಲ್ಲಿ ಆಗಿರುವ ಪ್ರಗತಿ ಮತ್ತು ಬೆಳವಣಿಗೆಯನ್ನು ಸೂಚಿಸುವ ಮಾಹಿತಿಗಳಿರುತ್ತವೆ. ಇವುಗಳು ವಿಭಿನ್ನವಾದ ಪ್ರಕಾರಗಳಲ್ಲಿ ನೋಡಬಹುದು. ಆದರೆ ಪ್ರಕಟಣೆಯ ಆಧಾರದ ಮೇಲೆ ಎರಡು ರೀತಿಯಲ್ಲಿ ವಿಂಗಡಿಸಲಾಗಿದೆ ಅವುಗಳು ಈ ಕೆಳಗಿನಂತಿವೆ.

1. ಪ್ರಕಾಶಿತವಾಗಿರದ ದಾಖಲೆಗಳು
2. ಪ್ರಕಾಶಿತವಾದ ದಾಖಲೆಗಳು

ಸಾರ್ವಜನಿಕದ ದಾಖಲೆಗಳು ಈ ಕೆಳಗಿನಂತೆ ಪಟ್ಟಿಮಾಡಬಹುದು

- ಕಡತಗಳು
- ಪ್ರಕಾಶಿತವಾದ ದಾಖಲೆಗಳು
- ವರದಿಗಳು
- ವರ್ತಮಾನ ಪತ್ರಿಕೆಗಳು
- ಮ್ಯಾಗಜೀನಗಳು

## ಅನುಷಂಗಿಕ ಮೂಲಗಳ ಅನುಕೂಲತೆಗಳು

## ADVANTAGES OF SECONDARY DATA SOURCES

ಅನುಷಂಗಿಕ ಮಾಹಿತಿ ಸಂಗ್ರಹಣೆಯ ಮೂಲಗಳು ಅದರದೆ ಆದ ಅನುಕೂಲತೆಗಳನ್ನು ಹೊಂದಿರುತ್ತವೆ. ಅವುಗಳು ಈ ಕೆಳಗಿನಂತಿವೆ.

- ದತ್ತಾಂಶಗಳ ಸಂಗ್ರಹ ಸುಲಭ ಮತ್ತು ಅಗ್ಗವಾಗಿರುತ್ತವೆ
- ದತ್ತಾಂಶಗಳು ಭೌಗೋಳಿಕ ವ್ಯಾಪ್ತಿ ವಿಶಾಲವಾಗಿರುತ್ತದೆ
- ದತ್ತಾಂಶಗಳ ಬಳಕೆಯು ವಿಶಾಲ ತಳಹದಿ ಹೊಂದಿರುತ್ತದೆ
- ತೀರ್ಮಾನಗಳನ್ನು ಪರೀಕ್ಷಿಸಲು ಸಹಾಯಕವಾಗುತ್ತದೆ.

## ಅನುಷಂಗಿಕ ಮೂಲಗಳ ಅನಾನುಕೂಲತೆಗಳು

## DISADVANTAGES OF SECONDARY DATA SOURCES

ಅನುಷಂಗಿಕ ಮಾಹಿತಿ ಸಂಗ್ರಹಣೆಯ ಮೂಲಗಳು ಕೂಡ ಅದರದೆ ಆದ ಅನುಕೂಲತೆಗಳನ್ನು ಹೊಂದಿರುವಂತೆ ಅನಾನುಕೂಲತೆಗಳು ಹೊಂದಿರುತ್ತವೆ. ಅವುಗಳು ಈ ಕೆಳಗಿನಂತಿವೆ.

- ಅಗತ್ಯಗಳು ಈಡೇರಿಸುವಲ್ಲಿ ಕೊರತೆ
- ನಂಬಿಕೆಯಲ್ಲಿನ ಕೊರತೆ
- ದತ್ತಾಂಶಗಳು ಕಾಲದೋಷ ಪೂರಿತವಾಗಿವೆ
- ದತ್ತಾಂಶಗಳು ತಮ್ಮ ಮೂಲದ ಬಗ್ಗೆ ಮಾಹಿತಿ ಇರುವುದಿಲ್ಲ